# ಕಂಪು

ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ಸ್ವಾತಂತ್ರ್ಯ ಸಂಚಿಕೆ

ಸಂಪುಟ 1 ಸಂಚಿಕೆ 4

Newsletter of MKANT
Swatantrya 2011

www.mallige.org


## ಈ ಸಂಚಿಕೆಯಲ್ಲಿ


| | |
|---|---|
| ಯುಗಾದಿ ವರದಿ | 1 |
| ಅಧ್ಯಕ್ಷರ ಸಂದೇಶ | 3 |
| ಕವನ | 4 |
| ಸಂಪಾದಕೀಯ | 4 |
| ಖೋ-ಖೋ ಕತೆ | 5 |
| Quiz | 5 |
| ಶುಭಾಶಯ | 6 |
| ಪಾಕಂಪಪ್ಪು | 7 |
| ಮಲ್ಲಿಗೆ ಮೊಗ್ಗುಗಳು | 8 |
| ಅಧ್ಯಕ್ಷರಿಗೊಂದು ಪತ್ರ | 11 |
| ಕ್ರೀಡಾಲೋಕ | 12 |
| ನೆರೆಮನೆಯ ನರುಗಂಪು | 13 |


ಪ್ರತಿ ಪುಟದ ಕೊನೆಯಲ್ಲಿರುವ ಒಗಟುಗಳನ್ನು ಬಿಡಿಸುತ್ತೀರಾ?

ಉತ್ತರಗಳು ಕೊನೆ ಪುಟದಲ್ಲಿ

## ಮಲ್ಲಿಗೆ ಕನ್ನಡ ಸಂಘ - ಯುಗಾದಿ 2011

### ಒಂದು ವರದಿ - ಸಂಧ್ಯಾ ಹೊನ್ನವಳ್ಳಿ



**ದೂ**ರದ ಲಂಡನ್ನಲ್ಲಿ, ಹಿಂದಿನ ದಿನವಷ್ಟೇ, ಪ್ರಿನ್ಸ್ ವಿಲ್ಲಿಯಮ್ ಮತ್ತು ಕೇಟ್ ಅವರ ವಿಜೃಂಭಣೆಯ ಮದುವೆ ಸಮಾರಂಭವನ್ನು ಕಿರುತೆರೆಯ ಮೇಲೆ ವೀಕ್ಷಿಸಿದ ನಂತರ, ನಮ್ಮ ಡ್ಯಾಲಸ್ ಕನ್ನಡಿಗರೆಲ್ಲಾ ತಮ್ಮದೇ ಆದ ಮತ್ತೊಂದು ಸಂತೋಷ ಸಮಾರಂಭಕ್ಕೆ ತಯಾರಾದರು. ಏಪ್ರಿಲ್ ೩೦ರಂದು, ನಮ್ಮ ಮಲ್ಲಿಗೆ ಕನ್ನಡ ಸಂಘವು, ಫ್ರಿಸ್ಕೋದ ವೇಕ್ಲಂಡ್ ಹೈಸ್ಕೂಲ್ನಲ್ಲಿ ಯುಗಾದಿ ಕಾರ್ಯಕ್ರಮವನ್ನು ಏರ್ಪಡಿಸಿದ್ದಿತು. ಈ ಕಾರ್ಯಕ್ರಮಕ್ಕೆ ಬಹಳಷ್ಟು ಮಂದಿ ಕನ್ನಡಿಗರು ಉತ್ಸಾಹದಿಂದ ಬಂದು, ಪಾಲ್ಗೊಂಡು, ಯುಗಾದಿಯ ಸಂಭ್ರಮವನ್ನು ದ್ವಿಗುಣಗೊಳಿಸಿದರು. ಬರುತ್ತಿದಂತೆಯೇ ಎಲ್ಲರನ್ನೂ ನಗು ಮುಖದಿಂದ ಸ್ವಾಗತಿಸಿದರು, ಮಲ್ಲಿಗೆ ಸಂಘದ ಅಧ್ಯಕ್ಷೆ, ರಾಜಶ್ರೀ ರಮೇಶ್. ತಮ್ಮ ಹಾಗು ತಮ್ಮವರ ಹೆಸರುಗಳು ಲಿಸ್ಟ್ನಲ್ಲಿ ಇರುವುದನ್ನು ಖಾತ್ರಿ ಮಾಡಿಕೊಳ್ಳುತ್ತಿದ್ದಂತೆಯೇ, ಘಮ ಘಮ ಅಂತ ಬೋಂಡ, ಪಕೋಡ, ಟೀ ಮತ್ತು ಕಾಫಿಗಳ ಸುವಾಸನೆ ಮೂಗಿಗೆ ಬಡಿದಿತ್ತು!




ಜನರು ಕ್ರಮೇಣ ಸಭಾಂಗಣದೊಳಗೆ ಕುಳಿತುಕೊಳ್ಳುತ್ತಿದ್ದಂತೆಯೇ, ಎಲ್ಲರನ್ನೂ, ಜಯಶ್ರೀ ಮೂರ್ತಿಯವರು "ನಮಸ್ಕಾರ" ಎನ್ನುತ್ತಾ ಅಚ್ಚು ಕನ್ನಡದಲ್ಲಿ ಬರಮಾಡಿಕೊಂಡರು. ಅಂದಿನ ಕಾರ್ಯಕ್ರಮದ ಎಮ್.ಸೀ ಗಳಾಗಿ ಶ್ರೀ ರಮೇಶ್ ಮೇಲ್ಕೋಟೆ ಮತ್ತು ಶ್ರೀ ಸುಕುಮಾರ್ ಮುತ್ಯ ಅವರ ಜೋಡಿ, ನಗೆಹನಿಗಳು ಹಾಗು ಪ್ರಶ್ನೋತ್ತರಾವಳಿಗಳ ಮೂಲಕ ಇಡೀ ಸಂಜೆಯನ್ನು ಸ್ವಾರಸ್ಯಕರವಾಗಿ ನಡೆಸಿಕೊಟ್ಟರು.

ಭಾವನಾ ಹೆಗಡೆಯವರು "ಕರಾರವಿಂದೇನ ಪದಾರವಿಂದಂ...." ಎಂದು ಶ್ರೀ ಕೃಷ್ಣನನ್ನು ಸ್ಮರಿಸುತ್ತಾ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ನಂತರ, ಸುಲತಾ ತಲಗೇರಿಯವರ ನುರಿತ ತರಬೇತಿಯಲ್ಲಿ ಇಲ್ಲಿನ ಕೆಲವು ಪ್ರತಿಭಾನ್ವಿತ "ಟೀನೇಜ್ ತರುಣಿಯರು", "ಎಲ್ಲೆಲ್ಲೂ ಹಬ್ಬ ಹಬ್ಬ...." ಎಂಬ ಹಾಡಿಗೆ ಮೋಹಕವಾಗಿ ನರ್ತಿಸಿ ಕಾರ್ಯಕ್ರಮಕ್ಕೆ ಮೆರುಗು ಕೊಟ್ಟರು.

ಜಯಶ್ರೀ ಮೂರ್ತಿ ಹಾಗು ಪೂರ್ಣಿಮಾ ಸುಬ್ರಹ್ಮಣ್ಯರ ನೇತೃತ್ವದಲ್ಲಿ, ಕನ್ನಡ ಶಾಲೆಯ ಮಕ್ಕಳು, ಕನ್ನಡದ ಹೆಸರಾಂತ ಕವಿ, ಶ್ರೀ ಜೀ.ಪೀ.ರಾಜರತ್ನಂ ಅವರ ಪದ್ಯಗಳಾದ "ನಮ್ಮ ಮನೆಯಲೊಂದು ಪುಟ್ಟ ಪಾಪ, ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ..." ಮುಂತಾದುವುಗಳನ್ನು ಸ್ಪಷ್ಟವಾಗಿ, ಸೊಗಸಾಗಿ ಹಾಡಿದರು. ಶ್ರೀ ರಾಜರತ್ನಂ ಅವರ ಜೀವನದ ಕೆಲವು ಸ್ವಾರಸ್ಯಕರ ವಿಷಯಗಳನ್ನು ಸಹ ಸಭಿಕರಿಗೆ ತಿಳಿಸಿಕೊಟ್ಟರು. ತಯಾರಿ ಜೋರಾಗಿತ್ತು!

ಸಹನಾ ಸುನಿಲ್ ಅವರ ನಿರ್ದೇಶನದಲ್ಲಿ ಮೂಡಿ ಬಂದ "ಡಾನ್ಸ್ ಮೆಡ್ಲೀ" ಎಲ್ಲರ ಚಪ್ಪಾಳೆ, ಶಿಳ್ಳೆಗಳಿಗೆ ಗುರಿಯಾಗಿ, "ಒನ್ಸ್ ಮೋರ್" ಅನ್ನೋವರೆಗೂ ಹೋಯಿತು. ಐದು ವರ್ಷಗಳೂ ತುಂಬದ ಎಂಟು ಮುದ್ದು ಪುಟಾಣಿಗಳು, ಬಣ್ಣ ಬಣ್ಣದ, ಚೆಣಿ ಮಿಣಿ ಉಡುಗೆಗಳನ್ನು ತೊಟ್ಟು, ಥಳಕು-ಬಳುಕಿನ ಕನ್ನಡದ ಚಿತ್ರ ಗೀತೆಗಳಿಗೆ, ಅಳುಕದೇ ಕುಣಿದಾಡಿ, "ಮಿಂಚಿಂಗೋ ಮಿಂಚಿಂಗ್" ಆಗಿಬಿಟ್ರು! ಆದರೆ ಇದರ ನಂತರ ಸಭಾಂಗಣದ ಪರದೆ ಮೇಲೆ ತೋರಿಸಿದ, ಪುಟ್ಟ ಮಕ್ಕಳ "ವಿಡಿಯೋ ಪ್ರೆಜೆಂಟೇಶನ್" ತೋರಿಸದಿದ್ದರೂ ನಡೀತಿತ್ತು. ಮಕ್ಕಳು ಕಾಣುತ್ತಿದ್ದರೇ ಹೊರತು ಅವರು ಹೇಳಿದ್ದೇನೂ ಕೇಳಿಸಲಿಲ್ಲ, ಸ್ಪಷ್ಟವಾಗಿ ಅರ್ಥವಾಗಲಿಲ್ಲ.....ಪಟ್ಟ ಶ್ರಮ ವ್ಯರ್ಥವಾಯಿತೇನೋ ಅನ್ನಿಸಿತು!

ಬಾಲದತ್ತಾ ಕನ್ನಡ ಶಾಲೆಯ ಮಕ್ಕಳು, ಎಲ್ಲರ ಅಚ್ಚು ಮೆಚ್ಚಿನ, ಸುಪ್ರಸಿದ್ಧ "ಚೆಲುವಯ್ಯ ಚೆಲುವೋ...." ಹಾಡಿಗೆ ಕೋಲಾಟ ಮಾಡಿ ಜನರ ಮನ ಗೆದ್ದರು. ಈ ಕೋಲಾಟ ನಿರ್ದೇಶಿಸಿದವರು ಸುಮಾ ರಾವ್.

ಚಿನ್ನದ ಹಕ್ಕಿ ಬಾಯಲ್ಲಿ ನೀರು ಕುಡಿಯುತ್ತೆ

ಸಾಕರ್ ಹಾಗೂ ಕರಾಟೆ ಆಡುವ ಇಲ್ಲಿನ ಕೆಲವು "ಹ್ಯಾಂಡ್ಸಮ್ ಹುಡುಗರು", ವೀಣಾ ವಡವಡ್ಗಿ ಅವರ ದಕ್ಷ ನಿರ್ದೇಶನದಲ್ಲಿ, ಅಚ್ಚುಕಟ್ಟಾಗಿ ಕಚ್ಚೆ ಪಂಚೆ ಶಲ್ಯಗಳನ್ನು ತೊಟ್ಟು, "ಶ್ರೀ ಗಣೇಶಾಯ ಧೀಮಹಿ" ಅನ್ನೋ ಹಾಡಿಗೆ ಲಯ ಬದ್ಧವಾಗಿ ನರ್ತಿಸಿದ್ದು ನಿಜಕ್ಕೂ ಪ್ರಶಂಸನೀಯ!

ಇದಾದ ನಂತರ ಬೀ.ಕೇ.ಸುಮಿತ್ರಾ ಅವರು ಹಾಡಿರುವ "ಕೋಲು ಕುಣಿದವೇ..." ಎಂಬ ಹಾಡಿಗೆ ಪುಟ್ಟ ಹೆಣ್ಣು ಮಕ್ಕಳು ಮಾಡಿದ ಕೋಲಾಟ ಕಣ್ಣಿಗೆ ಹಬ್ಬವಾಗಿತ್ತು. ಇದರ ನಿರ್ದೇಶನ, ಸುಶ್ಮಾ ರಂಗಸ್ವಾಮಿ ಅವರದು.

ಪಂಚತಂತ್ರದ ಕಥೆಯೊಂದನ್ನು ವಿಶಿಷ್ಟ ರೀತಿಯಲ್ಲಿ ನೆರೆದವರ ಮುಂದೆ ತೋರಿಸಿಕೊಟ್ಟರು 20ಕ್ಕೂ ಹೆಚ್ಚು ಚಿಕ್ಕ ಮಕ್ಕಳು. ಅವರ ಸುಂದರವಾದ ಬಣ್ಣ ಬಣ್ಣದ ಉಡುಗೆ ತೊಡುಗೆಗಳು ಬಹಳ ಅದ್ದೂರಿಯಾಗಿದ್ದವು. ಈ ವಿಭಿನ್ನವಾದ ನೃತ್ಯ-ನಾಟಕವನ್ನು ಮಾಡಿಸಿದವರು ವೀಣಾ ಅರವಿಂದ್ ಮತ್ತು ಪ್ರೀತಿ ರಾವ್.

ರಮೇಶ್ ಮೇಲ್ಕೋಟೆ ಅವರ ಚತುರ ನಿರ್ದೇಶನದಲ್ಲಿ ನೋಡಲು ಸಿಕ್ಕಿದ್ದು, ಮಕ್ಕಳದಲ್ಲ....ದೊಡ್ಡವರ "ವಿಚಿತ್ರ ಮಂಜರಿ". ಕನ್ನಡದ, ಎಂದೆಂದಿಗೂ ಮರೆಯಲಾಗದ, ಪ್ರಸಿದ್ಧ ಚಿತ್ರಗೀತೆಗಳಾದ, "ಅಲ್ಲಿ ಇಲ್ಲಿ ನೋಡುವೆ ಏಕೆ....", "ಬಾರೇ ಬಾರೇ ಚೆಂದದ ಚೆಲುವಿನ ತಾರೆ...." ಮುಂತಾದವುಗಳಿಗೆ ಒಂಥರಾ "ವಿಚಿತ್ರವಾಗಿ" ನಿಂತ ಜಾಗದಲ್ಲೇ, ಮುಖದಲ್ಲಿ ಏನೂ ಹಾವ ಭಾವಗಳ ಬದಲಾವಣೆಗಳಿಲ್ಲದೆ "ಡಾನ್ಸ್" ಮಾಡಿದ್ದು ಬಹಳ ಮಜವಾಗಿತ್ತು. ನವ ವೈಖರಿಯ ಸೊಗಸಾದ ಯತ್ನ!

ಮಲ್ಲಿಗೆಯ ಅಧ್ಯಕ್ಷೆ ರಾಜಶ್ರೀ ರಮೇಶ್ ಅವರಿಂದ ಸಂಘದ ಕೆಲವು ಮುಖ್ಯಾಂಶಗಳನ್ನು ಕೇಳಿಸಿಕೊಂಡ ಮೇಲೆ, ಶ್ರೀನಾಥ್ ಬೆಳ್ಳೋನಾ ಅವರಿಂದ ವಂದನಾರ್ಪಣೆ.

ಇನ್ನು ಎಲ್ಲರೂ ಕಾತುರರಾಗಿ ಕಾದು ಕುಳಿತಿದ್ದ ವಿಶೇಷ ಕಾರ್ಯಕ್ರಮದ ಸರದಿ. ಮಲ್ಲಿಗೆ ಕನ್ನಡ ಸಂಘ ಮತ್ತು ನಾಟ್ಯವೇದ - ಇವರ ಜಂಟಿ ಸಹಕಾರದಿಂದ ರೂಪಿಗೆ ಬಂದ ಕಾರ್ಯಕ್ರಮ. ಅನೇಕ ಬಿರುದುಗಳನ್ನು ಪಡೆದುಕೊಂಡಿರುವ ಹೆಸರಾಂತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರಾದ ಡಾ. ಟೀ. ಎಸ್. ಸತ್ಯವತಿ ಅವರ ಗಾಯನ. ಪಕ್ಕ ವಾದ್ಯದಲ್ಲಿ ಶ್ರೀ ಟಿ. ಎಸ್. ಕೃಷ್ಣ ಮೂರ್ತಿ ಅವರ ಪಿಟೀಲು ಮತ್ತು ಶ್ರೀ ಆನೂರು ಅನಂತಕೃಷ್ಣ ಶರ್ಮ ಅವರ ಮೃದಂಗ. ಕಲಾವಿದರ ಪರಿಚಯವನ್ನು ಮಾಡಿಕೊಟ್ಟವರು, ಸ್ವತಃ ಕಲಾವಿದರಾದ ಶ್ರೀಮತಿ ರೇವತಿ ಸತ್ಯು.

ಸಭಿಕರಿಗೆಲ್ಲಾ ಯುಗಾದಿಯ ಶುಭಾಶಯಗಳನ್ನು ಹೇಳುತ್ತಾ, ಹೊರನಾಡಿನಲ್ಲಿ ತಾಯ್ನಾಡಿನ ಸೊಗಡನ್ನು ಹಬ್ಬಿಸುತ್ತಿರುವ ಮಲ್ಲಿಗೆ ಕನ್ನಡ ಸಂಘವನ್ನು ಕೊಂಡಾಡಿದರು, ಡಾ. ಸತ್ಯವತಿ. "ಲಂಬೋದರ ಲಕುಮಿಕರ" ಎಂದು ಶ್ರುತಿ ಪರೀಕ್ಷೆ ಮಾಡಿಕೊಂಡು, ಆರಭಿ ರಾಗ, ರೂಪಕ ತಾಳದಲ್ಲಿ, ಶ್ರೀ ವಾದಿರಾಜರ ಕೃತಿ, "ಕಾವುದೆಮ್ಮನು ಜಗವ ಕಾವ ಕರುಣೆಯೆ...." ಎಂದು ಮನೋಜ್ಞವಾಗಿ ಹಾಡಿದರು. ನಂತರ ಆನಂದಭೈರವಿ ರಾಗದಲ್ಲಿ ಹಾಡಿದ, ಶ್ರೀ ಪುರಂದರದಾಸರ ಜನಪ್ರಿಯ ಕೃತಿ "ಹೊಡಿ ನಗಾರಿ ಮೇಲೆ ಕೈಯ್ಯಾ...." ಸುಮಧುರವಾಗಿತ್ತು. ಮುಂದಿನ ರಚನೆ ಶ್ರೀ ಪುರಂದರದಾಸರ "ಕುಣಿದಾಡೋ ಕೃಷ್ಣ..." ಹಂಸಾನಂದಿ ರಾಗದಲ್ಲಿ. ಈ ಕೃತಿಯಂತೂ ಮೂರೂ ಕಲಾವಿದರ ಅತ್ಯಂತ ಉನ್ನತ ಮಟ್ಟದ ಕಲಾಪ್ರತಿಭೆಯನ್ನೂ, ಸಾಧನೆಯನ್ನೂ ಎತ್ತಿ ತೋರಿಸುವಂತಿತ್ತು. ಕೊನೆಯದಾಗಿ ಶ್ರೀ ಪು.ತಿ.ನರಸಿಂಹಾಚಾರ್ಯರು ರಚಿಸಿರುವ, "ಕೃಷ್ಣನಾ ಕೊಳಲಿನಾ ಕರೆ....." ಸುಶ್ರಾವ್ಯವಾಗಿ ಹಾಡುತ್ತಾ ತಮ್ಮ ಗಾನ ಮಾಧುರ್ಯದಲ್ಲಿ ಎಲ್ಲರನ್ನೂ ತಲ್ಲೀನರಾಗಿಸಿಬಿಟ್ಟರು.

ಸಮಯದ ಅಭಾವದಿಂದಾಗಿ ಕಾರ್ಯಕ್ರಮವನ್ನು ಅಲ್ಲಿಗೇ ಸಮಾಪ್ತಿಗೊಳಿಸಬೇಕಾಯ್ತು. ಇಂಥಹ ಮಹಾನ್ ಕಲಾವಿದರು ನಮಗಾಗಿ ಬಂದು ಅವರ ಪ್ರತಿಭಾ ಸಾಗರದ ಕೆಲವು ಆಣಿ ಮುತ್ತುಗಳನ್ನು ನಮ್ಮೊಡನೆ ಹಂಚಿಕೊಳ್ಳುತ್ತಿರುವುದೇ ಒಂದು ದೊಡ್ಡ ವಿಷಯ. ಅಂಥಹದರಲ್ಲಿ, ಸಭಿಕರಾದ ನಾವು ಸಮಾಧಾನದಿಂದ ಕೂತು, ಮಾತು, ಗಲಾಟೆ, ಅಡಚಣೆಗಳೇನೂ ಇಲ್ಲದೆ ಕೇಳಿ ಸಂತೋಷ ಪಡಬೇಕು. ಆಗಲೇ ಗೌರವ, ಮರ್ಯಾದೆ, ಅಲ್ವೇ?

ಮಕ್ಕಳಿಗೆ ಹಸಿವು, ನಿದ್ದೆ ಎಲ್ಲಾ ಶುರುವಾಗಿತ್ತೇನೋ. ರಾಷ್ಟ್ರಗೀತೆಗಳನ್ನು ಹಾಡುವ ಮುಂಚೆಯೇ ಕೆಲವರು ಭೋಜನಕ್ಕೆ ಹೊರಟುಬಿಟ್ಟಿದ್ದರು. ಕೊನೆಯದಾಗಿ "ಉಡುಪಿ ಕೆಫೆ"ಯವರು ತಯಾರಿಸಿದ್ದ ರುಚಿಕರ ಊಟ. ಎಲ್ಲರೂ ಮಾತಾಡುತ್ತ, ಊಟ ಮಾಡುತ್ತಾ, ನಡೆದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸುತ್ತಾ, ನಿಧಾನವಾಗಿ ನಿರ್ಗಮಿಸಿದರು.

ಇಂಥಹ ಒಂದು ಸುಂದರ ಸಂಜೆಯನ್ನು ನಮ್ಮೆಲ್ಲರಿಗಾಗಿ ಏರ್ಪಡಿಸಿದ ಸಂಘದ ಕಾರ್ಯಕಾರಿ ಸಮಿತಿಯವರಿಗೆ, ಅವರ ಅತ್ಯಮೂಲ್ಯವಾದ ಸಮಯಕ್ಕೆ, ಪಟ್ಟ ಶ್ರಮಕ್ಕೆ, ವಹಿಸಿಕೊಂಡ ಜವಾಬ್ದಾರಿಗೆ ನಮ್ಮೆಲ್ಲರ ಹೃತ್ಪೂರ್ವಕ ಅಭಿನಂದನೆಗಳು!

ಯುಗಾದಿ 2011ರ ಚಿತ್ರಪಟಗಳಿಗಾಗಿ ಭೇಟಿಕೊಡಿ.

http://murthy.smugmug.com/Festival/Mallige/Ugaadi-2011/17017318_gQ8Gg5#1287890068_R7gKQjc

ಕಾಸಿನ ಕುದುರೆಗೆ ಬಾಲದಲ್ಲಿ ಲಗಾಮು

## ಅಧ್ಯಕ್ಷರ ಸಂದೇಶ

- ರಾಜಶ್ರೀ ರಮೇಶ್



ಮಲ್ಲಿಗೆ ಸಂಘದ ನನ್ನ ಪ್ರೀತಿಯ ಬಂಧು ಮಿತ್ರರಿಗೆ,

ಮಲ್ಲಿಗೆ ಸಂಘದ ಕಾರ್ಯಕಾರಿ ಸಮಿತಿ ಪರವಾಗಿ ಕಂಪು - ಸ್ವಾತಂತ್ರ್ಯ ಸಂಚಿಕೆ ಅರ್ಪಿಸಲು ಇಚ್ಛಿಸುತ್ತೀನಿ.
ನೀವೆಲ್ಲರು ಈ ಬೇಸಿಗೆ ರಜದಲ್ಲಿ ಆರಾಮವಾಗಿ, ಮನೆಯವರೊಡನೆ, ಮಕ್ಕಳೊಡನೆ ಚೆನ್ನಾಗಿ ಕಾಲ ಕಳೆಯುತ್ತಿದ್ದೀರ ಎಂದು ಭಾವಿಸುವೆನು.
ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ಮಲ್ಲಿಗೆ ಸಂಘದ ಯುಗಾದಿ ಆಚರಣೆಗೆ, ನೀವೆಲ್ಲ ಬಂದು, ಅದರ ಯಶಸ್ಸಿಗೆ ಕಾರಣವಾದಿರಿ, ಅದಕ್ಕೆ ಮತ್ತೊಮ್ಮೆ ಧನ್ಯವಾದಗಳು. ಹಾಗೆಯೆ ಸಂಘದ ಸದಸ್ಯತ್ವವನ್ನು ನವೀಕರಿಸಿದ ಎಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳು.

ಹೊಸ ಸಂವತ್ಸರದಲ್ಲಿ, ಮಲ್ಲಿಗೆ ಸಂಘ ಒಂದು ದೊಡ್ಡ ಬದಲಾವಣೆ ತಂದಿರುವುದು ನಿಮಗೆ ಆಗಲೆ ತಿಳಿದಿದೆ. ಇನ್ನು ಮುಂದೆ ನಿಮ್ಮ ವಾರ್ಷಿಕ ಸದಸ್ಯತ್ವ ಜನವರಿ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ಇರುತ್ತದೆ. ಮಲ್ಲಿಗೆ ಸಂಘದ ಪರಿಚಯ ಇರದ ಕನ್ನಡದವರಿಗೆ, ದಯವಿಟ್ಟು ತಿಳಿಸಿ, ಹಾಗು ಸದಸ್ಯರಾಗಲು ಪ್ರೋತ್ಸಾಹಿಸಿ. ಡಲ್ಲಸ್-ಫೋರ್ಟ್ವರ್ತ್ ನಲ್ಲಿ ನೂರಾರು ಕನ್ನಡಿಗರು ಇರುವುದು ನಿಜ.  ಎಲ್ಲರು ನಮ್ಮ ಸಂಘದಲ್ಲಿ ಭಾಗವಹಿಸಿದರೆ, ಚೆನ್ನ. ಇದು ನಮ್ಮ ಮುಂದಿನ ಪೀಳಿಗೆಯವರಿಗು ನಮ್ಮ ತಾಯಿನಾಡಿನ ಕಲೆ-ಸಂಸ್ಕೃತಿ ಜೊತೆ ನಂಟು ಬೆಳೆಸಲು ಒಳ್ಳೆಯ ಅವಕಾಶ.

ನನಗೆ ಈ ಸಮಯದಲ್ಲಿ ನನ್ನ ಬಾಲ್ಯ ದಿನಗಳು, ಬೇಸಿಗೆ ರಜಾ ದಿನಗಳು ತುಂಬಾ ನೆನಪಾಗುತ್ತಿದೆ. ಶಾಲೆ ಮುಗಿದು, ಪರೀಕ್ಷೆ ಫಲಿತಾಂಶ ಸಿಕ್ಕಮೇಲೆ, ಇನ್ನೇನು, ಬರೀ ಆಟ. ಹಗಲೆಲ್ಲ ಚೌಕ-ಬಾರಾ, ಸಂಜೆ ಕ್ರಿಕೆಟ್, ಲಗೋರಿ, ಕುಂಟೆ-ಬಿಲ್ಲೆ, ಕಲ್ಲೊ-ಮಣ್ಣೊ.  ಮತ್ತೆ ಆ ದಿನಗಳಿಗೆ ಹೋಗಿ ಬಿಡುವ ಆಸೆ. ಅದು ಸಾಧ್ಯವಿಲ್ಲ.  ಆದರೆ ನನ್ನ ಇಲ್ಲಿನ ಮಲ್ಲಿಗೆ ಸಂಘದ ಮಿತ್ರರೊಡನೆ ಆಡಿ ನಲಿಯುವ ಅವಕಾಶ ಸಧ್ಯದಲ್ಲೆ ಸಿಗುವುದು.  ನಿಜ! ಮಲ್ಲಿಗೆ ಸಂಘದ ವನ ಭೋಜನ (ಪಿಕ್ನಿಕ್) ಮತ್ತು ಕ್ರೀಡಾ ಸ್ಪರ್ಧೆಗಳು.  ಇದರ ಬಗ್ಗೆ ಹೆಚ್ಚಿನ ವಿವರ ನಿಮಗೆ ಕಳುಹಿಸುತ್ತೀವಿ.  ನೀವೆಲ್ಲರು, ನಿಮ್ಮ ಬಂಧು-ಮಿತ್ರರೊಡನೆ ಭಾಗವಹಿಸಬೇಕು ಅಂತ ವಿನಂತಿ.

2010ರಲ್ಲಿ ಬಿಡುಗಡೆ ಆದ ಕಂಪು ಈಗ ಮನೆ ಮನೆಯಲ್ಲಿ ಪ್ರಸಿದ್ಧಿ ಆಗಿರುವುದು ಹೆಮ್ಮೆಯ ವಿಷಯ. ಇದರ ಕಾರಣಕರ್ತರಾದ, ಸಂಪಾದಕಿ ಶ್ರೀಮತಿ ಪೂರ್ಣಿಮ ಸುಬ್ರಹ್ಮಣ್ಯ ಅವರಿಗೆ ಹಾರ್ದಿಕ ಅಭಿನಂದನೆಗಳು. ಕಂಪು, ನಮ್ಮ ಮಲ್ಲಿಗೆ ಕೂಟದವರಿಗೆ ಮಾತ್ರವಲ್ಲದೆ, ಭಾರತ ಹಾಗು ಇನ್ನಿತರ ದೇಶಗಳಲ್ಲಿ ವಾಸವಾಗಿರುವ ಕನ್ನಡದವರಿಗು ಚಿರ-ಪರಿಚಿತವಾಗಿದೆ. ನಿಮ್ಮ ಸಾಹಿತ್ಯದ ಆಸಕ್ತಿಯನ್ನು ಎಲ್ಲರೊಡನೆ ಹಂಚಿಕೊಳ್ಳಲು, ಸಂತೋಷ-ಸಂತಾಪ ಸೂಚಿಸಲು ಕಂಪು, ಒಳ್ಳೆ ಮಾರ್ಗ.  ಅದಕ್ಕೆ ನಿಮ್ಮ ಲೇಖನಗಳನ್ನು ನೀಡಿ ಸಕ್ರಿಯವಾಗಿ ಭಾಗವಹಿಸಿ ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೀನಿ.

ಬರುವ ಆಗಸ್ಟ್ 15 ಭಾರತ ದೇಶದಲ್ಲಿ ಸ್ವಾತಂತ್ರ್ಯ ದಿನಾಚರಣೆ.  ನಿಮಗೆಲ್ಲರಿಗು ಈ 64ನೆ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಆ ಸಂತೋಷ ಸಂದರ್ಭಕ್ಕೆ, ಕರ್ನಾಟಕದ ಪ್ರಸಿದ್ಧ ಸಾಹಿತಿಗಳಾದ ಡಾ.ಡಿ.ವಿ.ಗುಂಡಪ್ಪನವರ ಮಂಕುತಿಮ್ಮನ ಕಗ್ಗ ದಿಂದ, ನನಗೆ ಅತ್ಯಂತ ಪ್ರಿಯವಾದ ಪದ್ಯವೊಂದು:

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ;
ನಗುವ ಕೇಳುತ ನಗುವುದತಿಶಯದ ಧರ್ಮ॥
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ
ಮಿಗೆ ನೀನು ಬೇಡಿಕೊಳ್ಳೊ ಮಂಕುತಿಮ್ಮ॥

ನಗುನಗುತ ನಲಿ ನಲಿ........

ಇಂತಿ ನಿಮ್ಮ ವಿಶ್ವಾಸಿ
ರಾಜಶ್ರಿ ರಮೇಶ್

ಅಂಗಿ ಬಿಚ್ಚಿದ ಬಾವಿಗೆ ಜಾರಿದ

ಮುಖಪುಟ

## ಕವನ – ಅಮೇರಿಕ ಯಾಣ

- ನಾಗಶ್ರೀ ಶ್ರೀನಿವಾಸ್




ನಯಾಗರಾದ ಸೊಬಗು ಚಂದ
ಕ್ಯಾಲಿಫೋರ್ನೀಯಾದ ಹವಾ ಅಂದ
ಲಾಸ್-ವೇಗಸ್ನ ಬಳುಕು ಚಂದ
ಡ್ಯಾಲಸ್ ಜನರ ಒಲವು ಅಂದ

ನೋಡಬನ್ನಿರಿ ಅಮೇರಿಕ ದೇಶ
ಸವಿಯ ಬನ್ನಿರಿ ವಿಸ್ಮಯ ಪ್ರದೇಶ
ಸ್ವತಂತ್ರ ದಿವಸ ಆಚರಿಸಿದ ದೇಶ
ಪಟಾಕಿ ಸೊಬಗ ಜೊತೆ ವಾದ್ಯ ಘೋಷ

ಕ್ರಿಕೆಟ್ ಆಟ ನೋಡಲುಚಂದ
ಕನ್ನಡ ಮಾತು ಆಡಲು ಅಂದ
ಜನ-ಗಣ-ಮನ ಹಾಡಲು ಚಂದ
ಮೈಸೂರ ಮಣ್ಣು ಶ್ರೀಗಂಧ





ಭಾರತ ಮಾತೆಗೆ 64 ವರ್ಷ
ನೆನೆಯುತ ಮನದಲಿ ತುಂಬಿದೆ ಹರ್ಷ
ಮರೆಯಲಾಗದು ತಾಯಿಯ ಸ್ಪರ್ಶ
ವಿಮಾನವೇರಲು ಹೃದಯದಿ ಸಂಘರ್ಷ

ಈ ದೂರ ತೀರಕೆ ನಮ್ಮ ಪ್ರಯಾಣ
ಭಾರತ ಮಾತೆಗೆ ನಮ್ಮೆಲರ ನಮನ
ಭಾರತದ ಬೆಡಗಿಗೆ ಸೋತಿದೆ ಮನ
ಅಮೇರಿಕ ಸೊಬಗಲಿ ನಡೆದಿದೆ ಜೀವನ

—*—

## ಸಂಪಾದಕೀಯ

- ಪೂರ್ಣಿಮ ಸುಬ್ರಹ್ಮಣ್ಯ



ಎಲ್ಲರಿಗೂ ಕಂಪು ಸ್ವಾತಂತ್ರ್ಯ ಸಂಚಿಕೆಗೆ ಸ್ವಾಗತ. ಜುಲೈ 4ರಂದು ನಮ್ಮ ಕರ್ಮಭೂಮಿಯಲ್ಲಿ ಸ್ವಾತಂತ್ರ್ಯೋತ್ಸವ ನಡೆದರೆ ಆಗಸ್ಟ್ 15, ನಮ್ಮಲ್ಲಿ ಬಹುತೇಕರ ಜನ್ಮಭೂಮಿ ಭಾರತದಲ್ಲಿ. ನಮ್ಮ ಹಿರಿಯರನೇಕರ ಹೋರಾಟದ ಫಲ ನಮಗೆ ಅತ್ಯಂತ ಸಹಜವೆನಿಸುವ ಈ ಸ್ವಾತಂತ್ರ್ಯ. ಆ ಹೋರಾಟದ ಹಾದಿಯಲ್ಲಿ ಅವರು ಕಂಡ ಕಾಣ್ಕೆಗಳು, ಅವರ ಮುಂದಿದ್ದ ಸವಾಲುಗಳು ನೂತನ ತಲೆಮಾರಿಗೆ ಸಲ್ಲದೇ ಇರಬಹುದು. ಆದರೆ ಪ್ರತಿಯೊಂದು ಯುಗದಲ್ಲೂ, ಪ್ರತಿ ತಲೆಮಾರು, ಪ್ರತಿ ವ್ಯಕ್ತಿಗೂ, ಪ್ರತಿ ಕಾಲಘಟ್ಟದಲ್ಲೂ ಅವರವರದೇ ಆದ ಸಂತಸ-ಸಮಸ್ಯೆಗಳು ಇರುವುದನ್ನು ನಾವು ನೋಡಿರುತ್ತೇವೆ. ಸಂತಸಗಳು ವ್ಯಕ್ತಿತ್ವವನ್ನು ಬೆಳಗಿಸಿದರೆ, ಸಮಸ್ಯೆಗಳು ಅದೇ ವ್ಯಕ್ತಿಯನ್ನು ಗಟ್ಟಿಗೊಳಿಸುತ್ತವೆ, ಪರಿಹಾರವಾದಾಗ ಸ್ವಾತಂತ್ರ್ಯದ ಅನುಭವ ಕೊಡುತ್ತವೆ. ಭಾವನೆಗಳ ಅಭಿವ್ಯಕ್ತಿ ಈ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಲ್ಲೂ ಸಮಾನ ಮನಸ್ಕರೊಡನೆ ನಡೆವ ವಿಚಾರ ವಿನಿಮಯ ವ್ಯಕ್ತಿಯನ್ನು ಸಮಾಜಮುಖಿಯನ್ನಾಗಿ ಮಾಡುವುದರಲ್ಲಿ ಸಂಶಯವೇ ಇಲ್ಲ.

ನಿಮ್ಮೆಲ್ಲರ ನೋವು-ನಲಿವಿನ ಅಭಿವ್ಯಕ್ತಿಗೆ ಇಲ್ಲೊಂದು ತೆರೆದ ಬಾಗಿಲಿದೆ. ಈ ಬಾಗಿಲಿಂದ ನೀವು ಒಳಗೆ ಇಣುಕಿ ನೋಡಬಹುದು, ಒಳಗೆ ಬಂದು ಮನೆಯಲ್ಲೊಬ್ಬರಾಗಬಹುದು. ಈ ಮನೆಯ ಅಂದ ಚಂದಗಳ ಪಾಲುದಾರರಾಗಬಹುದು. ಬನ್ನಿ, ನಿಮ್ಮೆಲ್ಲರ ಪಾಲ್ಗೊಳ್ಳುವಿಕೆ, ಪ್ರೋತ್ಸಾಹ ಮತ್ತು ವಿಮರ್ಶೆ ಕಂಪುವಿನ ಮೂಲದ್ರವ್ಯ.

ಶುಭಾಶಯಗಳೊಂದಿಗೆ
ಪೂರ್ಣಿಮ ಸುಬ್ರಹ್ಮಣ್ಯ.


ಕರಿಯಪ್ಪನ ಮೇಲೆ ಬಿಳಿಯಪ್ಪ ಹತ್ತುತಾನೆ, ಇಳೀತಾನೆ

ಮುಖಪುಟ

### ಖೋ-ಖೋ ಕತೆ

(ಖೋ-ಖೋ ಕತೆ ಇತ್ತೀಚೆಗೆ ಜನಪ್ರಿಯವಾಗಿರುವ ಕತೆ ಕಟ್ಟುವ ಆಟ. ಒಂದೇ ಕತೆಯನ್ನು ಹಲವರು ಬರೆಯುವುದು. ಸಂಚಿಕೆಯಿಂದ ಸಂಚಿಕೆಗೆ ಕತೆ, ವಿವಿಧ ಕತೆಗಾರರ ಕಲ್ಪನೆಯ ಕುಸುರಿಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಸಮಕಾಲೀನ ಸಮಸ್ಯೆಯೊಂದರ ಹಲವು ಮಗ್ಗುಲುಗಳನ್ನು ಸರಳವಾಗಿ, ವಿಭಿನ್ನ ದೃಷ್ಟಿಕೋನಗಳಲ್ಲಿ ವಿವರಿಸುವುದು ಈ ಕತೆಯ ಉದ್ದೇಶ. ಖೋ-ಖೋ ಕತೆಯಲ್ಲಿ ನಿಮ್ಮೆಲ್ಲರ ಒಳನೋಟಗಳಿಗೆ ಅವಕಾಶ ಉಂಟು, ಬನ್ನಿ, ನೀವೂ ನಿಮಗನ್ನಿಸಿದ್ದನ್ನು ಬರೆಯಿರಿ.)

## ಎನ್ನ ನೀತಿಯ ಕುರುಡು



ಭಾಗ 3 - ಸತ್ಯಪ್ರಕಾಶ್ ಕಾಗಿನೆಲೆ

**'H**appy Birthday Honey..!' ಬಾಗಿಲು ತೆರೆದೊಡನೆ ಮುಗುಳ್ನಗುತ್ತಾ ಹೇಳಿದ, ಶ್ರೀಕರ್. ಸೊಂಟವನ್ನು ಬಳಸಿ ತುಟಿಗೆ ಹೂಮುತ್ತೊಂದನ್ನು ಇಟ್ಟು, ಹೂಗುಚ್ಛವನ್ನು ಕೊಟ್ಟು ಮತ್ತೆ 'Many Many Happy Returns of the day' ಅಂದನು. ಮನಸ್ಸಿಗೆ ಮುದವಾದರೂ, "ನೀತಿ ಮನೆಯಲ್ಲೇ ಇದೆ, ಹುಷಾರು" ಎನ್ನುವಂತೆ ಸನ್ನೆ ಮಾಡಿದಳು.

'Hello Daddy, whoa, beautiful flowers! ಎನ್ನುತ್ತಾ ಬಂದ ನೀತಿ ಹೂಗುಚ್ಛವನ್ನು ಕ್ಷಮಳಿಂದ ತೆಗೆದುಕೊಂಡಳು. ಟಣ್ ಎಂದು ಶಬ್ದ ಮಾಡುತ್ತ ಏನೋ ಬಿದ್ದಂತಾಯಿತು. ಏನೆಂದು ಕ್ಷಮ ಬಾಗಿ ನೋಡಬೇಕೆನ್ನುವಷ್ಟರಲ್ಲೇ Daddy bought a BMW! ಎನ್ನುತ್ತಾ ಬಾಗಿಲ ಕಡೆ ಹಾರಿದಳು ನೀತಿ. ಅವಳ ಹಿಂದೆಯೇ ಬಂದ ಕ್ಷಮಳ ಕಣ್ಣಿಗೆ ಕಂಡದ್ದು ಕಡುಗೆಂಪು ಬಣ್ಣದ 'BMW X5 .

ವಾರೆನೋಟದಲ್ಲೇ ಶ್ರೀಕರನಿಗೆ ಸಂತೋಷ, ಮೆಚ್ಚುಗೆ ಹಾಗು Thank You ಎಲ್ಲವನ್ನೂ ಒಟ್ಟಿಗೆ ಬೀರುವ ಮುಗುಳ್ನಗೆ ಬೀರಿದಳು. ವಾರದ ಹಿಂದೆಯಷ್ಟೆ ತನ್ನ ಹತ್ತು ವರ್ಷದಷ್ಟು ಹಳತಾದ Accord ಏಕೊ ಬಹಳ ಶಬ್ದ ಮಾಡುತ್ತಿದೆ ಎಂದರೂ ಕಿವಿಗೆ ಹಾಕಿಕೊಳ್ಳದಂತೆ ವರ್ತಿಸಿದುದು ಈಗ ಅರ್ಥ ಆಯಿತು.

ಏನು ಡ್ಯಾಡಿ, fourtieth birthday special for mommy? , ನನ್ನ sweet sixteen ಗೆ ನಂಗೆ Red color Toyota Prius ಬೇಕೇ ಬೇಕು. ಕೊಡಿಸ್ತೀರಿ ಅಲ್ವಾ ಡ್ಯಾಡಿ? ಅಂತ ಮುದ್ದುಕರೆದಳು. Many Happy birthday again , ನಲವತ್ತು ವರ್ಷವಾದರು ಇನ್ನೂ ಮೂವತ್ತು ವರ್ಷದವಳತರ ಕಾಣುತ್ತೀಯ ಮಾಮಿ ಅಂದಳು ನೀತಿ. ಮನಸ್ಸಿಗೆ ಚುಚ್ಚಿದರೂ, ವಯಸ್ಸು ಯಾರಿಗೆ ತಾನೆ ಆಗುವುದಿಲ್ಲ ಅಂದುಕೊಂಡಳು. "ಸರಿ, ಬೇಗ ಕೈ, ಕಾಲು ತೊಳೆದುಕೊಂಡು ಬನ್ನಿ, ನಿಮ್ಮ ಮುದ್ದಿನ ಮಗಳು, ನನಗೋಸ್ಕರ ವೆರೈಟಿ ಅಡಿಗೆ ಮಾಡಿಟ್ಟಿದ್ದಾಳೆ, ಇವತ್ತೊಂದು ದಿನ ಡಯಟ್, ಪಯಟ್ ಎಲ್ಲವನ್ನೂ ಬಿಡೋಣ ಅಂದಳು. ಎರಡೇ ನಿಮಿಷ, ಬಂದುಬಿಟ್ಟೆ, ಎಂದು ಒಳಗೆ ಹೋದ.

ಆನ್ನ, ಸಾರು ಮತ್ತು ಚಿತ್ರಾನ್ನವನ್ನು ಬಿಸಿ ಮಾಡೋಣವೆಂದು ಅಡುಗೆಮನೆಗೆ ಹೋದಳು, ಕ್ಷಮ. ಮನಸ್ಸು ಹಿಂದಿನದನ್ನು ನೆನಪು ಮಾಡಲು ಶುರುಮಾಡಿತು.

(ಮುಂದುವರಿಯುವುದು)

## *Know your Indian numbers*

*- Nagashree Srinivas*

Please fill the blank with a number associated with India maintaining the same relationship as its American counterpart.

Example – Texas : 166 :: Karnataka : <u>61</u> – Years since the state became a part of the union.

America : 235 :: India : __

Texas : 2 :: Karnataka : __

America : 3 :: India : __


America : 50 :: India : __

Answers: Page 12

ಚಿಕ್ಕ ಮಕ್ಕಳಿಗೆ ಚಿಕ್ಕ ಚಿಕ್ಕ ಟೋಪಿ

ಮುಖಪುಟ

## ಅಭಿನಂದನೆಗಳು



ಮಲ್ಲಿಗೆ ಕನ್ನಡ ಸಂಘದ ಸದಸ್ಯರಾದ , ಫ್ರಿಸ್ನೊ ನಗರದಲ್ಲಿರುವ ಸೌಮ್ಯ ಮತ್ತು ಅರುಣ್ ದಂಪತಿಗಳ ಮನೆಗೆ ಮೇ 17ರಂದು ಪುಟಾಣಿ ನಿತಿಲಳ ಆಗಮನವಾಗಿದೆ. ಅಣ್ಣ ಶಿಶಿರ್ ತಂಗಿಯನ್ನು ಜೋಪಾನ ಮಾಡುವುದರಲ್ಲಿ ತಲ್ಲೀನ. ಮಲ್ಲಿಗೆ ಸಂಘದ ಕಾರ್ಯಕಾರಿ ಸಮಿತಿ  ಹಾಗು ಸಂಘದ ಎಲ್ಲಾ ಸದಸ್ಯರ ಪರವಾಗಿ ಅವರ ಕುಟುಂಬಕ್ಕೆ ಅಭಿನಂದನೆಗಳು, ಮುದ್ದು ನಿತಿಲಳಿಗೆ ಶುಭ ಹಾರೈಕೆಗಳು.

## ಅಭಿನಂದನೆಗಳು

- ಮೀನಾ ಭಾರದ್ವಾಜ್



ನಲವತ್ತಕ್ಕೆ ಚಾಲೀಸ, ಅರವತ್ತಕ್ಕೆ ಅರಳು ಮರಳು ಎನ್ನುವ ನಾಣ್ಣುಡಿಗಳು ಬಹಳ ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತವೆ. ಬಹುತೇಕ ಬಾರಿ ನೀವು ತೊಡಗಿಸಿಕೊಂಡಿರುವ ಚಟುವಟಿಕೆಗಳು,ನಿಮಗೆ ಜೀವನದಲ್ಲಿ ಇರುವ ಆಸಕ್ತಿ, ಇದರಿಂದ ಈ ವಯಸ್ಸು ಎನ್ನುವುದು ಗಣನೆಗೆ ಬರುವುದಿಲ್ಲ. ಮಲ್ಲಿಗೆ ಕನ್ನಡ ಸಂಘ ಹುಟ್ಟುವಲ್ಲಿ ಪ್ರಮುಖ ರೂವಾರಿಯಾದ, ಹಾಗು ಪ್ರಸಕ್ತ ಟ್ರಸ್ಟಿಯಾದ ಸುಮಾ ಕುಲಕರ್ಣಿಯವರ ಬಗ್ಗೆ ಹೆಚ್ಚು ಹೇಳುವ ಅಗತ್ಯವೇ ಇಲ್ಲ.



ಕಳೆದ ಮಾರ್ಚ್ 24ಕ್ಕೆ ಅರವತ್ತರ ವಸಂತಕ್ಕೆ ಕಾಲಿಟ್ಟ ಸುಮಾ ಕುಲಕರ್ಣಿಯವರು ಮೇಲಿನ ನಾಣ್ಣುಡಿಗಳಿಗೆ ಅಪವಾದದಂತೆ, ಪಾದರಸದ ಹಾಗೆ ಪುಟಿಯುತ್ತ ಬಹುತೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಇವರು ಭಾಗಿಯಾಗಿರುವ ಅನೇಕ ಸಂಘಗಳಲ್ಲಿ ಮಲ್ಲಿಗೆ ಕನ್ನಡ ಸಂಘ, IANT,ICHF ಹೆಸರಿಸ ಬಹುದಂತವು. ಮಲ್ಲಿಗೆ  ಕನ್ನಡ ಸಂಘ  ಸಹ ನಿರ್ಮಾಣದಲ್ಲಿ ನಿರ್ಮಿಸಿದಂತ ಕಾರ್ಯಕ್ರಮಗಳಲ್ಲಿ,  ಸಂಘಕ್ಕೆ ಸತತ ಬೆಂಬಲವನ್ನಿತ್ತು ಪ್ರೋತ್ಸಾಹಿಸಿರುತ್ತಾರೆ.

ಬಹಳ ಕಿರಿಯವಯಸ್ಸಿನಲ್ಲೇ ವಿವಾಹವಾಗಿ ಬಂದ ಇವರು ತಮ್ಮ ವಿದ್ಯಾಭ್ಯಾಸವನ್ನು ಅಮೇರಿಕಾದಲ್ಲಿ ಮುಂದುವರೆಸಿ Texas Instrument  ಅಂತಹ ಪ್ರತಿಷ್ಠಿತ ಸಂಸ್ಥೆಯಲ್ಲಿ ಮೇಲ್ವಿಚಾರಕರಾಗಿ ಕಾರ್ಯ ಸಲ್ಲಿಸಿದ್ದಾರೆ. ಪತಿ ಪದ್ಮಾಕರ್ ಸ್ಥಳೀಯ Southwest Medical ನಲ್ಲಿ ಪ್ರಮುಖ ಪ್ರೊಫೆಸ್ಸರ್ಗಳಲ್ಲಿ ಒಬ್ಬರು. ಮೂರು ಮಕ್ಕಳ ಹಾಗು ಮೂರು ಮೊಮ್ಮಕ್ಕಳ ತುಂಬು ಸಂಸಾರ ಇವರದು. ಕೆಲವೇ ವರ್ಷದ ಕೆಳಗೆ ಇದೆಲ್ಲದರ ಮಧ್ಯೆ, Executive MBA  ಪದವಿಯನ್ನು ಸ್ಥಳೀಯ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ UTD ಯಲ್ಲಿ   ಓದಿ ಮುಗಿಸಿ ಯಶಸ್ವಿಯಾದ ಇವರು ಎಲ್ಲರಿಗೂ ಪ್ರೇರಕ ಶಕ್ತಿ.

ಇಂತಹ ವಿಶೇಷ ಸಂದರ್ಭದಲ್ಲಿ ಮಲ್ಲಿಗೆ  ಕನ್ನಡ ಸಂಘದ ಪರವಾಗಿ, ಸುಮಾ ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರುತ್ತೇನೆ.

ಮರದೊಳಗೆ ಮರಹುಟ್ಟಿ ಮರಚಿತ್ರ ಕಾಯಾಗಿ ತಿನ್ನಲಾರದ ಹಣ್ಣು ಬಲುರುಚಿ

# ಪಾಕಂಪಪ್ಪು

- ಪೂರ್ಣಿಮ ಸುಬ್ರಹ್ಮಣ್ಯ

## ಬ್ರಾಕೊಲಿ-ಓಟ್ಸ್ ದೋಸೆ



### ಸಾಮಗ್ರಿಗಳು

2 ಕಪ್ Quaker Quick Oats
1/4 ಕಪ್ ಸಣ್ಣ ರವೆ
1/4 ಕಪ್ ಅಕ್ಕಿ ಹಿಟ್ಟು
1 ಕಪ್ ಮೊಸರು
1 ಕಪ್ ತುರಿದ ಬ್ರಾಕೊಲಿ
ರುಚಿಗೆ ತಕ್ಕಷ್ಟು ಉಪ್ಪು
1 tsp ಸಕ್ಕರೆ

### ವಿಧಾನ

ಓಟ್ಸ್, ಸಣ್ಣ ರವೆ, ಅಕ್ಕಿ ಹಿಟ್ಟು, ಮೊಸರು ಎಲ್ಲವನ್ನೂ ಕಲಸಿ ಮಿಕ್ಸಿಯಲ್ಲಿ ೫ ನಿಮಿಷ ತಿರುಗಿಸಿ. ಈ ಹಿಟ್ಟಿಗೆ ಸಾಕಷ್ಟು ನೀರು ಸೇರಿಸಿ ರವೆ ದೋಸೆ ಹಿಟ್ಟಿನ ಹದಕ್ಕೆ ಕಲಸಿ. ಈ ಮಿಶ್ರಣಕ್ಕೆ ಉಪ್ಪು, ಸಕ್ಕರೆ, ತುರಿದ ಬ್ರಾಕೊಲಿ ಸೇರಿಸಿ. ಮಾಮೂಲಿ ದೋಸೆಯಂತೆ ಕಾದ ಕಾವಲಿ ಮೇಲೆ ಹೊಯ್ದು ದೋಸೆಗಳನ್ನು ಮಾಡಿ.

ಬ್ರಾಕೊಲಿ ಬದಲು ಈರುಳ್ಳಿ, ಕ್ಯಾರೆಟ್, ಎಲೆಕೋಸು, ಸೀಮೆಬದನೆಕಾಯಿ, ಹೀರೇಕಾಯಿ ಮುಂತಾದ ನಿಮ್ಮ ಇಷ್ಟದ ತರಕಾರಿ ಸೇರಿಸಬಹುದು.

## ದೊಣ್ಣೆ ಮೆಣಸಿನಕಾಯಿ ತೊಕ್ಕು

### ಸಾಮಗ್ರಿಗಳು

2 ಕೆಂಪು ದೊಣ್ಣೆ ಮೆಣಸಿನಕಾಯಿ(ಬೇರೆ ಬಣ್ಣದ್ದು ಮಾಡಬಹುದು)
1 tbsp ಕಡಲೆಬೇಳೆ
1 tbsp ಕೊತ್ತಂಬರಿ ಬೀಜ
1 tsp ಮೆಂತ್ಯ
7 -8 ಒಣಮೆಣಸಿನಕಾಯಿ
4 tbsp + 1 tbsp ಎಣ್ಣೆ
ರುಚಿಗೆ ತಕ್ಕಷ್ಟು ಉಪ್ಪು
ಒಗ್ಗರಣೆಗೆ ಸಾಸಿವೆ, ಇಂಗು, ಕರಿಬೇವಿನ ಸೊಪ್ಪು



### ವಿಧಾನ

ಒಂದು ಬಾಣಲೆಯಲ್ಲಿ ಕಡಲೆಬೇಳೆ, ಕೊತ್ತಮ್ಬರಿ ಬೀಜ, ಮೆಂತ್ಯ ಇವುಗಳನ್ನು ಬೇರೆಬೇರೆಯಾಗಿ ಹುರಿದಿಟ್ಟುಕೊಳ್ಳಿ.1/2 ಚಮಚ ಎಣ್ಣೆಯಲ್ಲಿ ಒಣಮೆಣಸಿನಕಾಯಿಗಳನ್ನು ಸ್ವಲ್ಪ ಬೆಚ್ಚಗೆ ಮಾಡಿಕೊಳ್ಳಿ. ಇವೆಲ್ಲವೂ ಆರಿದ ನಂತರ ಪುಡಿ ಮಾಡಿಟ್ಟುಕೊಳ್ಳಿ.

ದೊಣ್ಣೆ ಮೆಣಸಿನಕಾಯಿಯನ್ನು  ದೊಡ್ಡ ದೊಡ್ಡ ಹೋಳುಗಳಾಗಿ ಹೆಚ್ಚಿಕೊಳ್ಳಿ. ಬಾಣಲೆಯಲ್ಲಿ 1 ಚಮಚ ಎಣ್ಣೆಯೊಂದಿಗೆ ಈ ಹೋಳುಗಳನ್ನು 5 ನಿಮಿಷ ಹುರಿಯಿರಿ.ನಂತರ ಅದನ್ನು ಆರಲು ಬಿಡಿ. ಆರಿದ ನಂತರ 5 ನಿಮಿಷ ಮಿಕ್ಸಿಗೆ ಹಾಕಿ ತರಿತರಿಯಾಗಿ ರುಬ್ಬಿಕೊಳ್ಳಿ.

ಬಾಣಲೆಯಲ್ಲಿ 4 ಚಮಚ ಎಣ್ಣೆ ಹಾಕಿ ಸಾಸಿವೆ, ಕರಿಬೇವು ಇಂಗಿನ ಒಗ್ಗರಣೆ ಮಾಡಿ. ಇದಕ್ಕೆ ರುಬ್ಬಿಕೊಂಡ ದೊಣ್ಣೆ ಮೆಣಸಿನಕಾಯಿ, ಹುರಿದು ಪುಡಿ ಮಾಡಿದ ಮಿಶ್ರಣ, ಉಪ್ಪು ಹಾಕಿ 10 -15 ನಿಮಿಷ ಚೆನ್ನಾಗಿ ಕುದಿಸಿ. ಈಗ ದೊಣ್ಣೆ ಮೆಣಸಿನಕಾಯಿ ತೊಕ್ಕು ಸಿದ್ಧ. ಫ್ರಿಜ್ ನಲ್ಲಿ ಇಟ್ಟರೆ 2 -3 ವಾರ ಕೆಡುವುದಿಲ್ಲ. ಅನ್ನ, ದೋಸೆ, ರೊಟ್ಟಿ, ಚಪಾತಿ, ಪೂರಿ ಎಲ್ಲದರ ಜೊತೆಗೂ ಒಳ್ಳೆಯ ವ್ಯಂಜನ.

## ಪರಿಚಯ

- ಮೀನಾ ಭಾರದ್ವಾಜ್



2011 ಶೈಕ್ಷಣಿಕ ವರ್ಷ ಮುಗಿದಿದೆ. ಈ ವರ್ಷವನ್ನು ಯಶಸ್ವಿಯಾಗಿ ಕಳೆದು ಬೇಸಿಗೆ ರಜೆಯ ಮಜವನ್ನು ಅನುಭವಿಸಲು ಸಿದ್ದರಿದ್ದಾರೆ. ಡಲ್ಲಾಸ್ ಮಕ್ಕಳ ಈ ವರ್ಷದ ಸಾಧನೆಗಳನ್ನು ಮಲ್ಲಿಗೆ ಕನ್ನಡ ಸಂಘ ತಮ್ಮ ಎಲ್ಲ ಸದಸ್ಯರಲ್ಲಿ ಹಂಚಿಕೊಳ್ಳಲು ಹೆಮ್ಮೆ ಪಡುತ್ತದೆ. ನಿಮ್ಮ ಮಕ್ಕಳ ಸಾಧನೆಗಳನ್ನು, ಅನುಭವಗಳನ್ನು ನಮ್ಮಲ್ಲಿ ಹಂಚಿಕೊಳ್ಳಲು ನಿಮಗೆ ಸದಾ ಸ್ವಾಗತ.

## Salutatorian - Priyanka Melgiri



ಪ್ರಸಕ್ತ ಸಾಲಿನ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಒಬ್ಬಳಾದ ಕುಮಾರಿ. **ಪ್ರಿಯಾಂಕ ಮೇಲಗಿರಿ** ಬಗ್ಗೆ ಬರೆಯಲು ಈ ಕಾಲಂನಲ್ಲಿ ಸ್ಥಳದ ಅಭಾವವಾಗಬಹುದು ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. 12ನೆ ಇಯತ್ತೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸುವುದರೊಂದಿಗೆ ತನ್ನ ಶಾಲೆಯ Salutatorian ಆಗಿ ಹೊರ ಬಂದಿದ್ದಾಳೆ.ಓದುವುದರ ಜೊತೆಗೆ ಹಲವಾರು ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಿಟ್ಟಿಸಿದ್ದಾಳೆ. ನೃತ್ಯ ಎಂದರೆ ವಿಶೇಷ ಆಸಕ್ತಿಯಿರುವ ಈ ಕುವರಿ ಸ್ಥಳೀಯ ನೃತ್ಯ ಶಾಲೆಗಳಲ್ಲಿ ಒಂದಾದ Arthi School of Dance ನಿಂದ ವಿದ್ಯಾರ್ಥಿವೇತನವನ್ನು ಪಡೆದಿದ್ದಾಳೆ. ನೃತ್ಯ ಗುರುಗಳಾದ ಶ್ರೀಮತಿ ವಿದ್ಯಾ ಹಾಗು ಶ್ರೀಮತಿ ರೇವತಿ ಸತ್ಯು ಅವರಲ್ಲದೆ ಖ್ಯಾತ ನೃತ್ಯ ಪಟುಗಳಾದ ನಿರುಪಮ ರಾಜೇಂದ್ರನ್ ಅವರಿಂದ ವಿಶೇಷ ಪ್ರಶಂಸೆಗೆ ಒಳಪಟ್ಟಿದ್ದಾಳೆ. ಸದಾ ಹಸನ್ಮುಖಿ ಹಾಗು ಸ್ನೇಹ ಜೀವಿ ಪ್ರಿಯಾಂಕಳಿಗೆ ದತ್ತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಲ್ಲದೆ ತನ್ನನ್ನು ವಿವಿಧ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂದಿದ್ದಾಳೆ. ಅವಳು ಸಾಧನೆಯ ಹಾದಿಯಲ್ಲಿ ಕ್ರಮಿಸಿದ ಕೆಲವು ಮೈಲಿಗಲ್ಲುಗಳು ಇಲ್ಲಿವೆ.

Member of many prestigious honor societies including First Honor Roll(3.99GPA per year) , National Society of High Scholl Scholars, Mu Alpha Theta, French Honor Society and National Honor Society.

Winner of many awards including French Award, AP Biology Award and English Literature Award.

Summer Intern and HAS Scholar at NASA.

Winner and Coach for many regional and national debate competitions.

Community Service for Akshaya Patra, Believe In Books, Beatty Childcare Center, Pink Ladies Club and International Club.

ಬಿಳಿನೀರಿನಲ್ಲಿ ಕರಿಕಲ್ಲು ತೇಲುತ್ತದೆ


## ಕ್ಲೀವ್ಲ್ಯಾಂಡ್ ತ್ಯಾಗರಾಜ ಆರಾಧನೆ

**ಅ**ಮೆರಿಕ ಸಂಗೀತ ಪ್ರಪಂಚದಲ್ಲಿ ಕ್ಲೀವ್ಲ್ಯಾಂಡ್ ಒಹಾಯೋನ ತ್ಯಾಗರಾಜ ಆರಾಧನೆ ಮನೆ ಮಾತು. ಈ ಪ್ರತಿಷ್ಠಿತ ಆರಾಧನೆಯಲ್ಲಿ ಭಾಗವಹಿಸುವುದೆಂದರೆ ಹೆಮ್ಮೆಯ ವಿಷಯ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಡಲ್ಲಾಸ್ ನಿಂದ ಅನೇಕ ಚಿಣ್ಣರು ಹಾಗು ಅವರ ಕುಟುಂಬಗಳು ಏಪ್ರಿಲ್ 22ರ ವಾರಾಂತ್ಯದಲ್ಲಿ ಕ್ಲೀವ್ಲ್ಯಾಂಡ್ ಗೆ ಪ್ರಯಾಣಿಸಿದ್ದರು. ಇಲ್ಲಿ ನಡೆಯುವ ಸ್ಪರ್ಧೆಗಳು ವಯೋಮಾನಕ್ಕೆ ತಕ್ಕಂತವು. ಕೃತಿ, ವರ್ಣ,ಪಕ್ಕವಾದ್ಯಗಳಿಗೆ ಪ್ರತ್ಯೇಕವಾದ ವಿಭಾಗಗಳಾಗಿ ವಿಂಗಡಿಸಿರುತ್ತಾರೆ.



ಜಯ್ ಅಪ್ಪಾಜಿ

ಇದರಲ್ಲಿ ಭಾಗವಹಿಸಿದ ಡಲ್ಲಾಸ್‌ನ ಕನ್ನಡ ಕಣ್ಮಣಿಗಳು **ಪ್ರಣವ್ ಕಿಕ್ಕೇರಿ, ಜಯ್ ಅಪ್ಪಾಜಿ, ಸುಮಂತ್ ಮಧುಗಿರಿ**. ಪ್ರಣವ್ ಕಿಕ್ಕೇರಿ ಪ್ರಥಮ ಬಹುಮಾನದೊಂದಿಗೆ ಮತ್ತು ಸುಮಂತ್ ಮಧುಗಿರಿ ಸ್ಪರ್ಧೆಯಲ್ಲಿ ನಿರ್ಣಾಯಕರಿಂದ ವಿಶೇಷ ಬಹುಮಾನವನ್ನು ಗೆದ್ದು ಹೊರ ಬಂದಿದ್ದಾರೆ. ಎಲ್ಲ ಮಕ್ಕಳಿಗೂ ಅಭಿನಂದನೆಗಳು.



ಪ್ರಣವ್ ಕಿಕ್ಕೇರಿ

ಲ ವರುಷದ ಪೋರ ಪ್ರಣವ್ ಕಿಕ್ಕೇರಿ, ಮುತ್ತುಸ್ವಾಮಿ ದೀಕ್ಷಿತರ ಮೇರು ಕೃತಿಗಳಲ್ಲಿ ಒಂದಾದ ಮಾಮವ ಮೀನಾಕ್ಷಿ ಯನ್ನು ವರಾಳಿ ರಾಗ, ಮಿಶ್ರ ಛಾಪು ತಾಳದಲ್ಲಿ ಹಾಡಿ, ೬೨ ಅಭ್ಯರ್ಥಿಗಳ ನಡುವೆ ಪ್ರಥಮ ಬಹುಮಾನವನ್ನು ಪಡೆದಿದ್ದಾನೆ.ಇವನಿಗೆ ಬಹುಮಾನವನ್ನು ಇತ್ತವರು ಮತ್ಯಾರು ಅಲ್ಲ ಖ್ಯಾತ ವೇಣು ವಾದಕ ಏನ್. ರಮಣಿಯವರು. ಇಷ್ಟೇ ಅಲ್ಲದೆ ಬೆಳೆಯುವ ಪೈರು ಮೊಳಕೆಯಲ್ಲಿಯೇ ಎನ್ನುವ ಗಾದೆಯಂತೆ ಇರುವ ಇವನ ಪ್ರತಿಭೆಯನ್ನು ಕಂಡು ಮೇರು ಗಾಯಕ ಹಾಗು ಗಾಯಕಿಯರಲ್ಲಿ ಒಬ್ಬರಾದ ಶ್ರೀ. ಬಾಲಮುರಳಿ ಕೃಷ್ಣ ಮತ್ತು ಶ್ರೀಮತಿ.ಸುಧಾ ರಘುನಾಥನ್ ಪ್ರೋತ್ಸಾಹಿಸಿ ಹರಸಿದ್ದಾರೆ.



ಸುಮಂತ್ ಮಧುಗಿರಿ

ಸುಮಂತ್ ಮಧುಗಿರಿಗೆ ತನ್ನ ವಿಭಾಗದಲ್ಲಿ ಸಾಮಾನ್ಯಕ್ಕಿಂತ ಕೊಂಚ ಹೆಚ್ಚು ಕೃತಿಗಳನ್ನು ನೀಡಿ ಸವಾಲನ್ನು ಒಡ್ಡಿದ್ದಾರೆ. ಅವರು ಕೇಳಿದ ೫ ಕೃತಿಗಳು ಈ ರೀತಿ ಇವೆ. ' ರಘು ನಾಯಕ ರಾಗ 'ಹಂಸಧ್ವನಿ, ತಾಳ ಆದಿ, ತ್ಯಾಗರಾಜರ ಕೃತಿ ಸ್ವಾತಿ ತಿರುನಾಳ್ ರಚಿಸಿರುವ'ಮಾಮವಸದಾ ಜನನಿ' ರಾಗ ಕಾನಡ, ರೂಪಕ ತಾಳ,'ಅನ್ನಪೂರ್ಣೆ ವಿಶಾಲಾಕ್ಷಿ', ರಾಗ ಸಾಮ ಆದಿ ತಾಳ, ಮುತ್ತು ಸ್ವಾಮಿ ದೀಕ್ಷಿತರ ಕೃತಿ, ಕಾಮಾಕ್ಷಿ ಕಾಮಕೋಟಿ, ರಾಗ ಸಿಂಹೇಂದ್ರ ಮಧ್ಯಮಂ, ರೂಪಕ ತಾಳ, ದಿಕ್ಶಿತರ ಕೃತಿ. ಸುಬ್ರಮಣ್ಯನ ರಕ್ಷಿತೊಹಂ ಧನ್ಯಾಸಿ ರಾಗದಲ್ಲಿ ದೀಕ್ಷಿತರ  ಕೃತಿಗಳನ್ನು ವಯೊಲಿನ್ನಲ್ಲಿ ನುಡಿಸಿ ನಿರ್ಣಾಯಕರಿಂದ ವಿಶೇಷವಾದ ಬಹುಮಾನವನ್ನು ಗೆದ್ದು ಹಿಂತಿರುಗಿದ್ದಾರೆ.


# Debate Winners

## Harsha Upadhya

**Harsha Upadhya** 10th grader at Clark High School in Plano participated in a debate competition for FBLA(Future Business Leaders Association). The topic he chose was "How we can use social media for marketing? Different types of marketing techniques etc.".

Mallige Kannada Sangha would like to congratulate Harsha Upadhya for an outstanding showing in business competition at the state FBLA competition in San Antonio. Harsha Upadhya performed and represented Clark and Plano ISD in the best manner.

Lets wish him the very best for his National's which is going to be held in Orlando Florida.



## Pranav Murthy

Centennial High School(Frisco) student **Pranav Murthy** have been named District Champions in Public Forum Debate. He competed at NFL Debate Districts on February 25-26 at Plano East Senior High School and went undefeated for seven rounds to take first place and qualify for the National Tournament.



Centenial High School Qualifiers competed in San Antonio, TX from May 13-15 against other top competitors *from 16 states.* Pranav was a quarter finalist in Oratory, making him one of the top eight orators in the country.

Pranav Murthy (junior) District Champion in Public Forum Debate, qualified for the NFL National Tournament in June 2011. As a result, he has been recognized as a *Rupe Scholar*.

In 2009, the *Arthur N. Rupe Foundation* provided a generous grant to the *National Forensic League* to promote Public Forum Debate across the country. In addition to sponsoring the Rupe Foundation Qualifying Series of Public Forum Topics in February, March, and April, the Rupe Foundation grant also created this research portal to provide the highest quality educational research resources and exclusive interviews to the debate community and the public at large.

The Rupe Scholars will compete in Arthur N. Rupe Foundation Public Forum Debates at the NFL National Tournament where the top fourteen teams will receive generous college scholarships as part of the grant.

# ಅಧ್ಯಕ್ಷರಿಗೊಂದು ಪತ್ರ

- ರಾಘವೇಂದ್ರ ಕಮಲಾಕರ್ ಶೇಟ್



**ಅಧ್ಯಕ್ಷರೇ,**

ಈಗಾಗಲೇ ತಮಗೆ ಗೊತ್ತಿರುವಂತೆ ಭಾರತದಲ್ಲಿ ಮಹಿಳಾಮಣಿಗಳ ಕಾರುಬಾರು ಉಚ್ಚಸ್ಥಿತಿಯಲ್ಲಿದೆ. ಉದಾಹರಣೆಗೆ UPA ಅಧ್ಯಕ್ಷೆ ಸೋನಿಯಾ ಗಾಂಧೀ, ರಾಷ್ಟ್ರಪತಿ ಪ್ರತಿಭಾ ಪಾಟೀಲ್, ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಮುಂಚೂಣಿಗೆ ಬಂದಿರುವ ಜಯಲಲಿತಾ ಹಾಗು ಮಮತಾ ಬ್ಯಾನರ್ಜಿ. ಇವರ ನಡುವೆ ವಿದೇಶದ ಕನ್ನಡ ಸಂಘಟನೆಯೊಂದಕ್ಕೆ ಮಹಿಳೆಯರೊಬ್ಬರು ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡಿರುವುದು ಒಳ್ಳೆಯ ಬೆಳವಣಿಗೆ.

ತಮ್ಮದೇ ನೆಲೆಯಲ್ಲಿ ಒಂದು ಒಳ್ಳೆಯ ಆರೋಗ್ಯವಂತ ಕನ್ನಡ ಸಾಂಸ್ಕೃತಿಕ ಸಂದರ್ಭವನ್ನು ಸೃಷ್ಟಿಸಿಕೊಳ್ಳಲು ತಾವುಗಳು ಪ್ರಯತ್ನಿಸುತ್ತಿರುವುದು ಪ್ರಶಂಸನೀಯ.ಕನ್ನಡ ಭಾಷೆಯನ್ನು ಸಮೃದ್ಧ ಹಾಗೂ ಶ್ರೀಮಂತಗೊಳಿಸಲು ನಿರಂತರವಾಗಿ ಶ್ರಮಿಸಲು ಆ ತಾಯಿ ಭುವನೇಶ್ವರಿ ನಿಮಗೆ ಶಕ್ತಿ ಕರುಣಿಸಲಿ ಎಂದು ಹಾರೈಸುವೆ.

ಕನ್ನಡ ನಾಡಿನ ಅನೇಕ ಊರುಗಳಲ್ಲಿ ಜನಿಸಿರುವ ನಾವು, ಅವುಡುಗಚ್ಚಿ ಓದಿ, ಇಂಜಿನಿಯರಿಂಗ್ ಅಥವಾ ಇನ್ನಿತರ ಉನ್ನತ ಡಿಗ್ರಿಗಳನ್ನ ಮುಗಿಸಿದ್ದೀವಿ.
ನಂತರ ಒಂದು ಸಣ್ಣ ಕೆಲಸ ಸಿಕ್ಕರೆ ಸಾಕು ಎಂದು ಆರಂಭಿಸಿ ಸಾಫ್ಟ್ ವೇರ್ ಇಂಜಿನಿಯರ್ ಗಳಾಗೋ ಅಥವಾ ಮ್ಯಾನೇಜ್ಮೆಂಟ್ ಕನ್ಸಲ್ಟೆಂಟ್ ಗಳಾಗೋ ಯಶಸ್ವಿಯಾಗಿ, ದೇಶ ವಿದೇಶ ಸುತ್ತಿದ್ದು, ನಮ್ಮ ಜೀವನದ ಅಕೌಂಟಿಗೆ ಹತ್ತಾರು ಅನುಭವ ಜಮೆ ಮಾಡಿಕೊಂಡಿದ್ದೀವಿ.ಈ ಸುಧೀರ್ಘ ಹಾದಿಯಲ್ಲಿ ನೋವಿದೆ, ನಲಿವಿದೆ. ಯಶಸ್ಸು ಆತ್ಮವಿಶ್ವಾಸವನ್ನು ಹುಟ್ಟಿಸಿದೆ.

ವಾಸ್ತವದ ಸವಾಲುಗಳಿಗೆ ಮುಖಾಮುಖಿಯಾಗುತ್ತಲೇ ಕನ್ನಡ ಜನಪರವಾಗಿ ಬದುಕಲು ಹೊರಡಬೇಕಾದ ಅನಿವಾರ್ಯ ಪರಿಸ್ಥಿತಿ ಬಂದೊದಗಿದೆ.
ಸದ್ಯದ ಸ್ಥಿತಿಯಲ್ಲಿ ಭರವಸೆ ಹುಟ್ಟಿಸುವ ಕರ್ನಾಟಕ ರಾಜ್ಯದ ಯುವ ಪ್ರಜೆಗಳಲ್ಲಿ ನಾವು ವಿದೇಶದಲ್ಲಿ ನೆಲೆಸಿರುವ ಕನ್ನಡ ಜನತೆ ಕೂಡ ಸೇರಿದ್ದೀವಿ.
ನಮ್ಮ ಜನಗಳಿಗೆ ಏನಾದರೂ ಮಾಡಬೇಕು ಎಂಬ ಮನಸ್ಸೇ ನಮ್ಮನ್ನು ಕನ್ನಡ ಸೇವೆಯ ಹಾದಿಗೆ ಎಳೆದು ತಂದಿದೆ. ಈ ಮನಸ್ಸು ಅರಿತವರಂತೆ ನಮ್ಮ ಆಸೆಗೆ ಒತ್ತಾಸೆಯಾಗಿ ನಿಲ್ಲಲು ನಿಮ್ಮಂಥ ಸಂಸ್ಥೆಗಳು ಹುಟ್ಟಿಕೊಂಡಿವೆ.
Bangalore ಇದ್ದದ್ದು Bengaluru ಆಗಿ ಈಗಾಗಲೇ ವರ್ಷಗಳೇ ಕಳೆದಿವೆ. ಆದರೆ ನಾವು, ಅಂದರೆ ವಿದೇಶದಲ್ಲಿರುವವರು 'ಬ್ಯಾಂಗಲೂರ್' ಗುಂಗಿನಿಂದ ಹೊರ ಬಂದಂತೆ ಕಾಣುತ್ತಿಲ್ಲ. ಭಾರತದಲ್ಲಿರುವ ಅಂತರಾಷ್ಟ್ರೀಯ ಸಂಸ್ಥೆಗಳು ಈಗಾಗಲೇ ಇದನ್ನ ಅಳವಡಿಸಿಕೊಂಡಿವೆ. ಕನ್ನಡಿಗರಲ್ಲೇ ಇದರೆಡೆ ಉತ್ಸಾಹ ಕಡಿಮೆ.
'Bangalore International Airport' ಈಗಾಗಲೇ 'Bengaluru International Airport' ಆಗಿದೆ. ಎಲೆಕ್ಟ್ರಾನಿಕ್ಸ್ ಸಿಟಿ ಹತ್ತಿರವಿರುವ ಜರ್ಮನಿಯವರ 'AUDI' ಯವರೇ, ತಮ್ಮ ಶೋರೂಂ ಹಣೆಯ ಮೇಲೆ 'AUDI BENGALURU' ಅಂತ ಹಾಕ್ಕೊಂಡಿದಾರೆ. ನಮಗೇನು ಧಾಡಿ ಅಂತ...
ಕರ್ನಾಟಕದಲ್ಲಿ ಮನೆಯ ಹತ್ತಿರ ಬರುವ ತರಕಾರಿ ಗಾಡಿಯವನ ಹತ್ತಿರ ಕನ್ನಡದಲ್ಲಿ ವ್ಯವಹರಿಸುವ ನಾವು, ಮಾಲ್ ಗಳಿಗೆ ಹಾಗು commercials/brigade/MG Road ಗೆ ಹೋಗುತ್ತಿದ್ದಂತೆ ಕನ್ನಡವನ್ನೇ ಮರೆತವರಂತೆ ಆಡುತ್ತೇವೆ.ಮನೆಯಲ್ಲಿ 'ದೋಸೆ, ವಡೆ, ಉಪ್ಪಿಟ್ಟು' ಆಗಿರುವ ತಿಂಡಿಗಳು, ಹೊರಗೆ ಹೋಗುತ್ತಿದ್ದಂತೆ "ದೋಸಾ, ವಡಾ, ಉಪ್ಮಾ' ಗಳಾಗಿ ಬಿಡುತ್ತವೆ. ಇದು ಎಷ್ಟರ ಮಟ್ಟಿಗೆ ಸರಿ?

ಅಲ್ಲದೇ ನಿಮ್ಮ ಕನ್ನಡ ಪ್ರೇಮವನ್ನ ಬರೀ ಕೆಲವೇ ಕಾರ್ಯಕ್ರಮಗಳಿಗೆ ಸೀಮಿತವಾಗಿಡದೆ ಏನಾದರೊಂದು ಕಾರ್ಯಕ್ರಮ ನಡೆಯುತ್ತಲೇ ಇರಬೇಕು.
ಉದಾಹರಣೆಗೆ, ಹೆಚ್ಚು ಕನ್ನಡ ಸಾಹಿತ್ಯ ಮತ್ತು ಇತರೆ ಸಾಹಿತ್ಯದ ಸೊಗಡನ್ನು ಕಲೆ ಹಾಕಿ ಕರ್ನಾಟಕದ ಜನರಲ್ಲಿ ಓದುವ ಕಿಚ್ಚು ಹಚ್ಚಿಸುವುದು. ಕರ್ನಾಟಕದ ಜಾಗತಿಕ ಕಲೆಗಳನ್ನು ಜನರಿಗೆ ತಲುಪಿಸುವುದು. ಸುದ್ದಿಗಳನ್ನು, ಸಂಗತಿಗಳನ್ನು ವಿಮರ್ಶೆಗೆ ಒಳಪಡಿಸುವುದು, ವಿಚಾರ ಮಂಥನ ಮಾಡುವುದು ಮತ್ತು ಮುಕ್ತ ಚರ್ಚೆಗಳನ್ನು ಮಾಡಿ ತಿಳುವಳಿಕೆಯನ್ನು ವೃದ್ಧಿಸಿಕೊಳ್ಳಲು ಅನುಕೂಲಮಾಡಿಕೊಡುವುದು,ಇನ್ನೂ ಮುಂತಾದ ಪ್ರಯತ್ನಗಳು ನಡೆಯುತ್ತಲೇ ಇರಬೇಕು.
ನೆನಪಿರಲಿ, ಕನ್ನಡಮ್ಮನ ಮಾನ ಕಾಪಾಡೋ ದೊಡ್ಡ ಜವಾಬ್ದಾರಿಯ ಮೋಟೆಯನ್ನ ಉತ್ತರ ಟೆಕ್ಸಾಸ್ ನ ಮಲ್ಲಿಗೆ ಸಂಘದವರು ನಿಮ್ಮ ತಲೆಯ ಮೇಲೆ ಹೊರಸಿದ್ದಾರೆ.

ನಮ್ಮ ಕನ್ನಡ ನಾಡು ನುಡಿಯ ರಕ್ಷಣೆಗಾಗಿ ನಾವು ಎಂದೆಂದೂ ಕಂಕಣಬದ್ಧರಾಗಿರೋಣ
ಸಿರಿಗನ್ನಡಂ ಗೆಲ್ಗೆ - ಸಿರಿಗನ್ನಡಂ ಬಾಳ್ಗೆ

ನಿಮ್ಮಲ್ಲೊಬ್ಬ ಕನ್ನಡಿಗ,
ರಾಘವೇಂದ್ರ ಕಮಲಾಕರ್ ಶೇಟ್, ದಾವಣಗೆರೆ.
ಸದ್ಯಕ್ಕೆ ಟೆಕ್ಸಾಸ್ ನ ರಿಚರ್ಡ್ ಸನ್ ನಲ್ಲಿ

ಚಿಕ್ಕ ಮನೆ ತುಂಬ ಚಿಕ್ಕೆ ತುಂಬಿದೆ

# ಕ್ರೀಡಾಲೋಕ

- ಮೀನಾ ಭಾರದ್ವಾಜ್






**ಸಾ**ವಿರಾರು ಮೈಲು ದೂರ, ಸಾವಿರ ಸಾಗರದಾಚೆ ನೆಲಸಿರುವ ಪ್ರತಿಯೊಬ್ಬರಿಗೂ ಸದಾ ತನ್ನತನವನ್ನು ಹುಡುಕುವ ಅಥವಾ ತನ್ನವರನ್ನು ಹುಡುಕುವ ತವಕ. ಭಾರತದಲ್ಲಿ ಬಹುತೇಕ ಭಾಗ ಪಾಶ್ಚಿಮಾತ್ಯದ ಕಡೆ ವಾಲಿದರೆ, ಅಮೆರಿಕಾದಲ್ಲಿ ನೆಲೆಸಿರುವ ನಾವು, ನಾವೆಲ್ಲಾ ಬೆಳೆಯುವಾಗ ಇದ್ದ ವಾತಾವರಣವನ್ನು ಸೃಷ್ಟಿಸಿ ಆನಂದಿಸುವುದು ಸಾಮಾನ್ಯ . ಫೆಬ್ರುವರಿ ಹದಿನೇಳರಂದು ಕ್ರಿಕೆಟ್ ವರ್ಲ್ಡ್ ಕಪ್ ಉಧ್ಘಾಟನಾ ಸಮಾರಂಭ. ಬಹುತೇಕ ಕನ್ನಡಿಗರು ಅವರ ಸ್ನೇಹಿತರದ್ದೆ ಸಣ್ಣ ಗುಂಪುಗಳನ್ನು ಸೇರಿ ಒಬ್ಬೊಬರ ಮನೆಯಲ್ಲಿ ಒಂದೊಂದು ಸರತಿಯಂತೆ ಎಲ್ಲ ಪಂದ್ಯಗಳನ್ನು ವೀಕ್ಷಿಸಿದ್ದಾಯಿತು. ಮೂವತ್ತು ದಶಕಗಳ ತವಕಕ್ಕೆ ಏಪ್ರಿಲ್ ಐದರಂದು ವಾಂಖೆಡೆ ಕ್ರೀಡಾಂಗಣದಲ್ಲಿ ತೆರೆ ಬಿದ್ದಿತು. ಧೋನಿ ತಂಡ ವರ್ಲ್ಡ್ ಕಪ್ಪನ್ನು ತನ್ನ ಮುಡಿಗೆ ಹಾಕಿಕೊಂಡ ಕ್ಷಣ ಡಲ್ಲಾಸ್ನ ಕ್ರೀಡಾ ಪ್ರೇಮಿಗಳು ಗೆಲುವನ್ನು ಆಚರಿಸುವುದರ ಮೂಲಕ ದೇಶಪ್ರೇಮವನ್ನು ಎತ್ತಿ ಹಿಡಿದರು. ಹಲವಾರು ವರುಷಗಳಿಂದ ಇಲ್ಲಿ ನೆಲಸಿರುವ ನಮಗೆ ಭಾರತದ ಮೇಲೆ ಎಷ್ಟು ದೇಶಭಕ್ತಿಯೋ ಅಷ್ಟೇ ವ್ಯಾಮೋಹ ಈ ಮಣ್ಣಿನ ಬಗ್ಗೆ. ಸ್ಥಳೀಯ ಬಾಸ್ಕೆಟ್ಬಾಲ್ ತಂಡ ಮ್ಯಾವರಿಕ್ಸ್ ಒಂದೊಂದೇ ಪಂದ್ಯವನ್ನು ಗೆದ್ದು ಮುಂದೆ ಹೋಗುತಿತ್ತು . ಹೀಗೆ ಗೆಲ್ಲುತ್ತಾ ಫೈನಲ್ಸನ್ನು ತಲುಪಿದ್ದು ಆಯಿತು. ಎಲ್ಲದರಲ್ಲೂ ಸಾಮ್ಯತೆಗಳನ್ನು ಕಾಣುವ ನಾವು ಹೇಗೆ ಭಾರತೀಯತೆಯನ್ನು ಅಥವಾ ನಮ್ಮ ತನವನ್ನು ಗುರುತಿಸಿಕೊಳ್ಳುತ್ತೀವಿ ಎನ್ನಲು ಸಣ್ಣ ಉದಾಹರಿಸಬಹುದಾದ ಒಂದು ಸಂವಾದ. ಅಲ್ಲ ಕಣೆ ನಮ್ಮವರು (ಟೀಮ್ ಇಂಡಿಯಾ) ಮೂವತ್ತು ವರುಷ ಆದಮೇಲೆ ಗೆದ್ರಲ್ಲ ಇವರು ಹಾಗೆ ಗೆಲ್ತಾರೆ ನೋಡ್ತಾ ಇರು. ಅಲ್ವೇ ಈ ಡರ್ಕ್ ನವಿಟ್ಜ್ಕಿಗು ನಮ್ಮ ಧೋನಿ ಥರ ಅದೃಷ್ಟ ಅಲ್ವ... ಆಡುತಿರುವ ಪಂದ್ಯ ಎಲ್ಲ ಗೆಲ್ತಾ ಇದ್ದಾನೆ. ಧೋನಿನು ಹೀಗೆ ಉದ್ದ ಕೂದಲು ಬಿಟ್ಕೊಂಡಿದ್ದ ಅಲ್ವ.. ಎಲ್ಲ ಪಂದ್ಯದಲ್ಲೂ ಅಪ್ರತಿಮ ಆಟ ನಮ್ಮ ಡರ್ಕ್ದ ಆದ್ರೆ ಕೊನೆ ಆಟದಲ್ಲಿ ಯಾಕೋ ಅಷ್ಟು ಬ್ಯಾಸ್ಕೆಟ್ ಮಾಡಲಿಲ್ಲ. ಅದೇ ನಮ್ಮ ಸಚಿನ್ ಥರ ಅವನು ನೋಡು ಕೊನೆ ಪಂದ್ಯದಲ್ಲಿ ಜಾಸ್ತಿ ರನ್ಸ್ ಮಾಡೋಕ್ಕೆ ಆಗಲಿಲ್ಲ ಇಷ್ಟೆಲ್ಲಾ ಮಾತು ಕಥೇಲಿ ಮ್ಯಾವರಿಕ್ಸ್ ಏನ್. ಬಿ. ಏ ಚಾಂಪಿಯನ್ಸ್ ಆಗಿದ್ದು ಆಯಿತು. ಡೌನ್ ಟೌನ್ ನಲ್ಲಿ ನಡೆದ ಮೆರವಣಿಗೆಯಲ್ಲಿ ಅಪಾರ ಕ್ರೀಡಾಭಿಮಾನಿಗಳು ಸೇರಿದ್ದರು. ಈ ವಿಜಯೋತ್ಸವದಲ್ಲಿ ಕೆಲವು ಕನ್ನಡ ಕುಟುಂಬಗಳು ಭಾಗವಹಿಸಿ ಬಂದರು. ಅದರ ಒಂದು ತುಣುಕು ಈ ಚಿತ್ರಗಳು.




## *Know your Indian numbers*
***Solutions***

America : 235 :: India : 64 – Years since independence

Texas : 2 :: Karnataka : 8 – Ranking based on the size of the states

America : 3 :: India : 7 - Ranking based on the size of the country

America : 50 :: India : 29 – Number of states in the country

ಕೋಟೆ ಸುತ್ತ ಬೆಳ್ಳಿ ಉಡಿದಾರ

# ನಿಮ್ಮೊಲುಮೆ ನಮಗಿರಲಿ ತಂದೆ

-ತ್ರಿವೇಣಿ ಶ್ರೀನಿವಾಸರಾವ್, ಇಲಿನಾಯ್



**ಮೈ**ಯ ಕೊಟ್ಟಿರಿ ಮಾಟ ಕೊಟ್ಟಿರಿ

ತಿದ್ದಿದಿರಿ ಕಗ್ಗಲ್ಲನು

ನಿಮ್ಮ ಮೋಹಕ ದನಿಯ ಕೊರಳಲಿ

ಇಟ್ಟು ಕಾಯ್ದಿರಿ ನನ್ನನು

ಬನ್ನಿ ಹರಸಿರಿ ತಂದೆಯೇ

ಆಸೀನರಾಗಿರಿ ಮುಂದೆಯೇ..!

ಇವು ಗಾಯಕ ರಾಜು ಅನಂತಸ್ವಾಮಿಯವರು, ತಮ್ಮ ತಂದೆ ದಿವಂಗತ ಮೈಸೂರು ಅನಂತಸ್ವಾಮಿಯವರ ಸವಿ ನೆನಪಿಗಾಗಿ ಕವಿ ಲಕ್ಷ್ಮೀನಾರಾಯಣ ಭಟ್ಟರಿಂದ ಬರೆಸಿಕೊಂಡ ಸಾಲುಗಳು. ತನ್ನೆದುರು ಈಗಿಲ್ಲದಿದ್ದರೂ, ತನ್ನ ತುಂಬ ತುಂಬಿಕೊಂಡಿರುವ ತಂದೆಯನ್ನು ಕುರಿತು, ಒಬ್ಬ ಮಗನಲ್ಲಿ ಇರಬಹುದಾದ ಗೌರವ, ಅಭಿಮಾನಗಳು ಬನ್ನಿ ತಂದೆಯೇ, ಆಸೀನರಾಗಿರಿ ಮುಂದೆಯೇ ಎಂಬ ಭಟ್ಟರ ಸಾಲುಗಳಲ್ಲಿ ಸುಂದರವಾಗಿ ಅಭಿವ್ಯಕ್ತಗೊಂಡಿದೆ!

ಅಮ್ಮನ ಎದೆಯಾಳದಲ್ಲಿ, ಗಾಳಕ್ಕೆ ಸಿಲುಕಿದ ಮೀನಾಗಿ ಚಡಪಡಿಸಿದ ನಮ್ಮೆಲ್ಲರ ಹೃದಯ ತಾಯಿಗಾಗಿ ಮಿಡಿಯುವಷ್ಟು, ಅದೇಕೋ ತಂದೆಯನ್ನು ಅರಿಯಲೇ ಇಲ್ಲ. ತಾಯಿಯನ್ನು ಬಗೆಬಗೆಯಾಗಿ ಬಣ್ಣಿಸಿ, ನಮ್ಮ ಪದ ಭಂಡಾರ ಖಾಲಿಯಾಯಿತೇ ಹೊರತು ನಮಗಂತೂ ಇನ್ನೂ ತೃಪ್ತಿಯಾಗಿಲ್ಲ. ಅವಳನ್ನು ಅದೆಷ್ಟು ಉಪಮಾನಗಳಿಂದ ಕರೆದರೂ, ಅದೂ ಸಾಲದಾಯಿತೆಂಬ ಕೊರಗು ಇದ್ದೇ ಇದೆ! ಹಾಗಾಗಿ ನಮಗೆ ಭೂಮಿಯೂ ತಾಯಿ, ಗಿಡ, ಮರ, ನದಿಗಳನ್ನೊಳಗೊಂಡ ನಿಸರ್ಗವೂ ತಾಯಿ, ನಡೆದಾಡುವ ನಾಡೂ ತಾಯಿಯೇ, ಆಡುವ ನುಡಿ ಕೂಡ ಮಾತೃಭಾಷೆಯೇ!

ಹಾಗಾದರೆ ತಂದೆ? ತಂದೆ ನಮಗೇನೂ ಉಪಕಾರ ಮಾಡಲೇ ಇಲ್ಲವೇ? ತಂದೆಯನ್ನು ನೆನೆಯುವ ಬಗ್ಗೆ ಯಾರೂ ಏನೂ ಹೇಳಿಯೇ ಇಲ್ಲವೇ? ಈ ಅನುಮಾನಕ್ಕಂತೂ ಆಸ್ಪದವೇ ಇಲ್ಲ. ಮಾತೃ ದೇವೋ ಭವ ಎಂದು ಬೋಧಿಸಿದ ಅದೇ ವೇದವೇ, ಅದೇ ದನಿಯಲ್ಲಿ ಪಿತೃ ದೇವೋ ಭವ ಎಂದೂ ಆಜ್ಞಾಪಿಸಲು ಮರೆತಿಲ್ಲ. ಈ ತಂದೆಯಾದರೋ ಸ್ವಲ್ಪ ನಿಧಾನಿ, ಸದಾ ವಟಗುಟ್ಟುವ ವಾಚಾಳಿ ಅಮ್ಮನೆದುರು ಬರಿದೇ ಹೂಂಗುಟ್ಟುವ ಮಹಾಮೌನಿ!

ನಮ್ಮದು ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ. ತಂದೆಯೇ ಕುಟುಂಬದ ಯಜಮಾನ! ತಾಯಿ ತುಂಬಿ ಬಂದ ಮಮತೆಗೆ, ನೊರೆಹಾಲಿನಂತಹ, ಅಕಳಂಕ ಒಲವಿನ ಪ್ರತಿರೂಪವಾದರೆ, ತಂದೆ ಶಕ್ತಿ, ಶೌರ್ಯದ ಸಂಕೇತ! ನಮ್ಮ ಪುರಾಣ,ಇತಿಹಾಸಗಳಂತೂ, ಇಂತಹ ಅನೇಕ ಮಹಾನ್ ಪಿತೃಗಳ ಕಥೆಗಳಿಂದ ತುಂಬಿಹೋಗಿದೆ! ಇಲ್ಲಿ, ತಮ್ಮ ಉತ್ತಮ ನಡೆ-ನುಡಿಗಳಿಂದ ತಮ್ಮ ಮಕ್ಕಳಿಗಷ್ಟೇ ಅಲ್ಲ, ತಾವು ಜನಿಸಿದ ನಾಡಿಗೇ ಕೀರ್ತಿ ತರುವಂತಹ ಆದರ್ಶಪ್ರಾಯ ತಂದೆಯಂದಿರು ಆಗಿಹೋಗಿದ್ದಾರೆ. ಅವರ ಜೊತೆಗೆ, ನಚಿಕೇತನಂತಹ ಹಾಲುಗೆನ್ನೆಯ ಹಸುಳೆಯನ್ನು, ನರಕದ ನಾಯಕ ಯಮರಾಜನಿಗೆ ಒಪ್ಪಿಸಿದ ನಿಷ್ಠುರಿ ತಂದೆ ಇದ್ದಾನೆ, ಪ್ರಹ್ಲಾದನಂತಹ ಜಾಣ ಪುಟ್ಟನನ್ನು ಚಿತ್ರಹಿಂಸೆಗೊಳಿಸಿದ, ಪಿತೃಕುಲಕ್ಕೇ ಒಂದು ಕಳಂಕವೆನಿಸಿದ ಹಿರಣ್ಯಕಶಿಪುವೂ ಇಲ್ಲೇ ಇದ್ದಾನೆ, ಮಗನ ಪಾಲಿನ ಅಮೂಲ್ಯ ಯೌವನವನ್ನೇ ಕಸಿದುಕೊಂಡ ಯಯಾತಿಯಂತಹ ಸ್ವಾರ್ಥಿ ತಂದೆ ಇದ್ದಾನೆ, ತನ್ನ ನೂರು ಮಕ್ಕಳ ಅವನತಿಯನ್ನು ತನ್ನೆದುರೇ ಕಂಡು ಎದೆಯೊಡೆದುಕೊಂಡ, ಕುರುಡು ವ್ಯಾಮೋಹಿ ತಂದೆ ಧೃತರಾಷ್ಟ್ರನೂ ಈ ಸರತಿಯ ಸಾಲಿನಲ್ಲಿದ್ದಾನೆ!

ಹೃದಯದ ಮಮತೆಯನ್ನೆಲ್ಲ ಎದೆಹಾಲಾಗಿ ಉಣಿಸಿದ ತಾಯಿಯ ಪ್ರೇಮಮಯ ವ್ಯಕ್ತಿತ್ವದೆದುರು, ತಂದೆಯದು ಸ್ವಲ್ಪ ಗಡುಸಿನ, ಬಿರುಸಿನ, ಅನಾಕರ್ಷಕ ವ್ಯಕ್ತಿತ್ವವೇ. ಅಮ್ಮನ ಮಾತು, ಮನಸ್ಸು ಎಲ್ಲಾ ತೆರೆದ ಪುಸ್ತಕದಂತೆ. ತೆಂಗಿನಕಾಯಿಯ ಗಟ್ಟಿ ಚಿಪ್ಪಿನ ಒಳಗೆ ಅಡಗಿರುವ, ಸಿಹಿ ಎಳನೀರಿನಂತಹ, ತಂದೆಯ ಅಂತ:ಕರಣ ಸುಲಭವಾಗಿ ಅರ್ಥವಾಗುವುದು ಕಷ್ಟವೇ. ಅದನ್ನು ಸಾವಧಾನದಿಂದ ತಿಳಿಯುವ ಪ್ರಯತ್ನವನ್ನು ನಾವೇ ಮಾಡಲಿಲ್ಲ, ಅಥವಾ ತಿಳಿಯುವ ಅವಕಾಶವೇ ನಮಗೆ ಸಿಗಲಿಲ್ಲ!

ಎಂದೋ ನಡೆದಿರಬಹುದಾದ ಆ ಘಟನೆಯನ್ನು ನಿಮ್ಮ ಮನಸ್ಸಿನ ಪರದೆಯ ಮೇಲೆ ಮತ್ತೊಮ್ಮೆ ತಂದುಕೊಳ್ಳಿ. ಅದು ನೀವು ಪಬ್ಲಿಕ್ ಪರೀಕ್ಷೆಯಲ್ಲಿ, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ದಿನವಿರಬಹುದು. ಅಮ್ಮ, ಲಗುಬಗೆಯಿಂದ ಸಕ್ಕರೆ ಮಿಠಾಯಿ ತಯಾರಿಸಿ, ಪರಿಚಿತರೆಲ್ಲರಿಗೂ ಹಂಚಿ, ಹಿಗ್ಗಿ, ತನ್ನ ಆನಂದ ಪ್ರಪಂಚಕ್ಕೇ ತಿಳಿಯುವಂತೆ ಜಾಹೀರಾತು ನೀಡುತ್ತಿದ್ದರೆ, ತಂದೆ ಎಲ್ಲಿ? ಯಾವುದೋ ಗೋಡೆಗೊರಗಿ ಧ್ಯಾನಮಗ್ನನಂತೆ ನಿಂತ ತಂದೆಯ ಮುಖದಲ್ಲಿ ಹೌದೋ, ಅಲ್ಲವೋ ಎಂಬಂತೆ ಇಣುಕಿದ ಧನ್ಯತಾಭಾವವನ್ನು ಗುರುತಿಸುವ ಪುರುಸೊತ್ತಾದರೂ ಯಾರಿಗಿತ್ತು? ಇದಲ್ಲವಾದರೆ, ತಂದೆಯ ಮುಖದಲ್ಲಿ ಹೀಗೂ ಒಂದು ಭಾವ ಅಡಗಿದ್ದಿರಲೂಬಹುದೇನೋ, ಅದು - ನನ್ನ ಮಕ್ಕಳಲ್ಲವೇ ಅವರು, ಅವರು ಇರಬೇಕಾಗಿದ್ದು ಹೀಗೇ ತಾನೇ? - ಎಂಬ ತುಸು ಹಮ್ಮು ಬೆರೆತ ಹೆಮ್ಮೆ!

ಇದು ಬಹಳ ಹಿಂದೇನಲ್ಲ, ಸ್ವಲ್ಪ ವರ್ಷಗಳ ಕೆಳಗೆ ಜನರಲ್ಲಿದ್ದ ಮನೋಭಾವವೇ ಬೇರೆ. ಅದು ತಲೆಯನು ಬಾಚಲು ಅಮ್ಮನೇ ಬೇಕು, ಹೋಂ ವರ್ಕ್ ಮಾಡಿಸೆ ಅಪ್ಪನೇ ಬೇಕು ಎಂಬ ಪರಿಮಿತಿಗಳಿದ್ದ ಕಾಲ. ತಂದೆ ಮಾಡುವ ಕೆಲಸಗಳೇ ಬೇರೆ. ತಾಯಿಯದೇ ಬೇರೆ ಎಂಬ ವರ್ಗೀಕರಣಗಳು ಆಗ ಬಲವಾಗಿದ್ದವು. ಪುಟ್ಟ ಮಗುವೊಂದನ್ನು ನೋಡಿಕೊಳ್ಳುವುದು, ಅದೂ, ಮಾತೇ ಆಡದ ಮುಗ್ಧ ಜೀವವನ್ನು ನಿರ್ವಹಿಸುವುದು ಬಹಳ ನಾಜೂಕಿನ ಕೆಲಸ. ಇದನ್ನು ಮಗುವಿನ ತಾಯಿಯೊಬ್ಬಳು ನಿಭಾಯಿಸುವಷ್ಟು ನವಿರಾಗಿ ತಂದೆಯಿಂದ ಸಾಧ್ಯವಿಲ್ಲ ಎಂಬ ಭಾವನೆಯಿತ್ತು.

ಬಹುಶ: ಹಿಂದಿದ್ದ ಅವಿಭಕ್ತ ಕುಟುಂಬಗಳಲ್ಲಿ, ಮನೆಗಳಲ್ಲಿ ಬಹಳ ಜನಗಳುಇರುತ್ತಿದ್ದುದರಿಂದ ತಂದೆಗೆ ಮಕ್ಕಳನ್ನು ನೋಡಿಕೊಳ್ಳಬೇಕಾದ ಅನಿವಾರ್ಯತೆ ಕೂಡ ಇರಲಿಲ್ಲವೇನೋ. ಆಗೆಲ್ಲ ಮಕ್ಕಳು ಬೆಳೆದು ದೊಡ್ಡವರಾಗುವರೆಗೂ ಅವರು ತಾಯಿಯ ಸ್ವತ್ತು. ತಂದೆಯೇನಿದ್ದರೂ ಮಕ್ಕಳ ಪಾಲಿಗೆ ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುವ ಅಪರೂಪದ ಅತಿಥಿ!

ಇವತ್ತಿನ ಪರಿಸ್ಥಿತಿ ಹಾಗಿಲ್ಲ. ತಮ್ಮ ಕುಸುಮ ಕೋಮಲ ಕಂದಮ್ಮಗಳನ್ನು ಅಮ್ಮನಿಗಿಂತ ಮಿಗಿಲಾಗಿ ಸಲಹುವ ಜಾಣ್ಮೆ ಇಂದು ಅಪ್ಪನ ಪಾಲಾಗಿದೆ. ಮೊದಲ ಬಾರಿ ತಾಯಿಯಾಗುವ ಹೆಣ್ಣಿಗೆ ಇರುವಷ್ಟೇ ಆತಂಕ, ಜವಾಬ್ದಾರಿಗಳು ತಂದೆಗೂ ಇರುತ್ತವೆ. ಅದಕ್ಕೆಂದೇ ಇಲ್ಲಿಯ ಆಸ್ಪತ್ರೆಗಳಲ್ಲಿ , ಮೊದಲ ಮಗು ಜನಿಸುವ ಮೊದಲು, ಮಗುವಿನ ಪಾಲನೆ-ಪೋಷಣೆಯ ಬಗೆಗೆ ಭಾವೀ ತಂದೆ, ತಾಯಿಯರಿಗೆ ವೈದ್ಯರು ಪ್ರಾಥಮಿಕ ತರಬೇತಿಗಳನ್ನು ಕೂಡ ನೀಡುವ ವ್ಯವಸ್ಥೆಯಿದೆ!

## ನೆರೆಮನೆಯ ನರುಗಂಪು

ತಾಯಿಯ ಬೆಚ್ಚನೆಯ ಗರ್ಭದಿಂದ ಹೊರಬಂದ ಅಬೋಧ ಮಗು ತನ್ನ ತಂದೆ, ತಾಯಿಗಳನ್ನು ನೋಡುತ್ತಾ, ಅವರು ಕಲಿಸಿದ್ದನ್ನು ಕಲಿಯುತ್ತಾ, ಅವರ ಕಣ್ಣಿನಿಂದಲೇ ಈ ಜಗವನ್ನು ನೋಡುತ್ತಾ, ಅಪರಿಚಿತ ಪ್ರಪಂಚವನ್ನು ತನ್ನದಾಗಿಸಿಕೊಳ್ಳುತ್ತಾ ಹೋಗುತ್ತದೆ. ಪುಟ್ಟ ಮಗುವೊಂದನ್ನು ತಾಯಿ,ತಂದೆಗಳು ಕೈ ಹಿಡಿದು ನಡೆಸುತ್ತಿರುವ ಸಾಮಾನ್ಯ ದೃಶ್ಯ ಮಗುವಿನ ಭವಿಷ್ಯಕ್ಕೂ ಅನ್ವಯಿಸುತ್ತದೆ.  ಆದರೆ ಬದಲಾಗುತ್ತಿರುವ ಸಮಾಜದ ಜೀವನ ವಿಧಾನಗಳಿಗೆ, ಹೊಸ ಆಲೋಚನೆಗಳಿಗೆ ತಕ್ಕಂತೆ, □ತಂದೆ-ತಾಯಿ-ಮಗು□-ಎಂಬ ಕುಟುಂಬದ ಪರಿಕಲ್ಪನೆ ಕೂಡ ಬದಲಾಗುತ್ತಿದೆ.  ತಾಯಿ ಅಥವ ತಂದೆ ಏಕವ್ಯಕ್ತಿ ಪೋಷಕರಾಗಿರುವ ಹೊಸ ಕುಟುಂಬ ಪದ್ಧತಿಯೊಂದು ಈಗ ಮೆಲ್ಲನೆ ತಲೆ ಎತ್ತುತ್ತಿದೆ. ಇಂತಹ ವ್ಯವಸ್ಥೆಯನ್ನು ವಿವಾಹ ವಿಚ್ಛೇದನ, ಪತಿ-ಪತ್ನಿಯರಲ್ಲಿ ಒಬ್ಬರ ಮರಣ….ಇಂತಹ ಕೆಲವು ಅನಿವಾರ್ಯ ಪ್ರಸಂಗಗಳಲ್ಲಿ ಸ್ವಾಗತಿಸಬಹುದಾದರೂ, ಉಳಿದಂತೆ ಮಗುವಿನ ಮಾನಸಿಕ ಬೆಳವಣಿಗೆಯ ದೃಷ್ಟಿಯಿಂದ ಅಷ್ಟೇನೂ ಉತ್ತಮವೆನಿಸದು.

ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ತಾಯಿಯಷ್ಟೇ ತಂದೆಯ ಪಾತ್ರವೂ ಹಿರಿದು. ತಾಯಿಯ ತುಂಬು ಪ್ರೀತಿ ಮಗುವಿನಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿದರೆ, ತಂದೆಯ ವಾತ್ಸಲ್ಯ ಮಗುವಿಗೆ ಬೆಚ್ಚಗಿನ, ಸುರಕ್ಷಿತ ಭಾವವನ್ನು ನೀಡುತ್ತದೆ.  ಇಂತದೊಂದು ಭದ್ರತೆಯ ಭಾವನೆಯನ್ನು ತಾಯಿ ನೀಡುವುದು ಸಾಧ್ಯವಿಲ್ಲ. ಹಾಗಾಗಿ ಮಕ್ಕಳು ಈಜು, ಸೈಕಲ್ ಮುಂತಾದ ಕ್ರೀಡೆಗಳನ್ನು ಕಲಿಯಲು ತಂದೆಯನ್ನೇ ಆಶ್ರಯಿಸುತ್ತವೆ.  ಬೆಳೆಯುತ್ತಿರುವ ಮಗುವಿನ ಎದುರು ಇರುವ ಮಾದರಿ ವ್ಯಕ್ತಿತ್ವವೆಂದರೆ ಅದು ತನ್ನ ತಂದೆಯದೇ.  ಅಪ್ಪನ ಪ್ರತಿಯೊಂದು ಚಲನವಲನವನ್ನು ಗಮನಿಸುತ್ತಲೇ ಇರುವ ಮಗುವಿನ ಪುಟ್ಟ ಕಣ್ಣುಗಳಿಗೆ ತನ್ನ ತಂದೆಯೇ ಪುರುಷೋತ್ತಮ!  ಮಗು ಅಮ್ಮನ ಮೃದು ಅಪ್ಪುಗೆಯಲ್ಲಿ ನೆಮ್ಮದಿಯಾಗಿರಲು ಹಾತೊರೆಯುವಂತೆ, ಗಾಳಿಯಲ್ಲಿ ಗಿರಗಿರ ತಿರುಗಿಸುವ, ಮೇಲಕ್ಕೆ ಎಸೆದು ಹಿಡಿಯುವ ಅಪ್ಪನ ಒರಟು ಆಟಗಳನ್ನೂ ಕಿಲಕಿಲ ನಗುತ್ತಾ ಆನಂದಿಸುತ್ತದೆ!

ಕೆಲವು ದಿನಗಳ ಹಿಂದೆ ತಾಯಂದಿರ ದಿನ ಮುಗಿಯಿತು. ಈಗ ತಂದೆಯಂದಿರ ದಿನ ಬಂದಿದೆ. ನಾವು ನಮ್ಮ ತಂದೆ-ತಾಯಿಗಳನ್ನು ಈ ಒಂದು ದಿನ ಮಾತ್ರ ನೆನೆಯಬೇಕಿಲ್ಲ, ಪ್ರತಿದಿನವೂ ಅವರನ್ನು ಗೌರವಿಸುತ್ತೇವೆ. ಅವರಿಗೆ ನಮಸ್ಕರಿಸುತ್ತೇವೆ. ಈ ಫಾದರ್ಸ್ ಡೇ, ಮದರ್ಸ್ ಡೇ ಯಾಕೆ ಮಾಡಬೇಕು? ತಂದೆ, ತಾಯಿಗಳಿಗಾಗಿಯೇ ಒಂದು ದಿನವನ್ನು ಮೀಸಲಿಟ್ಟು, ಆ ದಿನ ಮಾತ್ರ ಅವರನ್ನು ನೆನೆಯುವುದು ನಮ್ಮ ಸಂಸ್ಕೃತಿಯಲ್ಲ. -  ಈ ರೀತಿಯ ಮಾತುಗಳು ಪ್ರತಿ ವರ್ಷದಂತೆ, ಈ ವರ್ಷವೂ ಮತ್ತೊಮ್ಮೆ ಪ್ರತಿಧ್ವನಿಸಿ ಹೋಗಲಿದೆ.

ಹೆತ್ತವರನ್ನು ದಿನವೂ ಪೂಜಿಸಿ, ಪ್ರೀತಿಸಿ. ಎಲ್ಲಾ ಸರಿ. ಆದರೆ ಆ ಪ್ರೀತಿಗೆ ಒಂದು ದಿನವನ್ನು ಸಾಂಕೇತಿಕವಾಗಿ  ಮೀಸಲಾಗಿಟ್ಟು, ಅದನ್ನು ಸಂಭ್ರಮದಿಂದ, ಸಂತಸದಿಂದ ಆಚರಿಸುವುದರಲ್ಲಿ ಏನಾದರೂ ತಪ್ಪಿದೆಯೇ? ನಮ್ಮದು ಮಾತ್ರ ಶ್ರೇಷ್ಠ, ವಿದೇಶೀಯರ ಆಚರಣೆಗಳೆಲ್ಲ ಪೊಳ್ಳು, ಅರ್ಥಹೀನ ಎಂದು ದೂರುವುದು ನಮ್ಮ ಸಿನಿಕತನ,ಅಹಂಕಾರಗಳನ್ನಷ್ಟೇ ತೋರಿಸುವುದಿಲ್ಲವೇ?

## ಒಗಟುಗಳ ಉತ್ತರ

1.ಎಣ್ಣೆ ದೀಪ
2.ಸೂಜಿ ದಾರ
3.ಬಾಳೆಹಣ್ಣು
4.ಕಾವಲಿ-ದೋಸೆ
5.ಉಗುರು
6.ಮಗು
7.ತೆಂಗಿನಕಾಯಿ
8.ಕಣ್ಣು
9.ಉಪ್ಪು
10.ಬಾಳೆಗೊನೆ
11.ಹಲ್ಲುಗಳು
12.ಬೀಸೋಕಲ್ಲು
13.ಚಂದ್ರ
14.ಅಂಗಿ

ಮುಂದಿನ ಸಂಚಿಕೆಯನ್ನು ದೀಪಾವಳಿ-2011ರ ವೇಳೆಗೆ ಸಿದ್ಧಪಡಿಸಲಾಗುವುದು.ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ,  ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು mkantcommittee@gmail.com ವಿಳಾಸಕ್ಕೆ ಕಳುಹಿಸಿ.